# 1. ಆದರ್ಶ ಜೀವನ

ಪ್ರತಿಯೊಬ್ಬ ಮಾನವನೂ ತೃಪ್ತಿದಾಯಕವಾದ ಜೀವನವನ್ನು ಬಯಸುತ್ತಾನೆ. ಆತನು ತಾನು ಮಾಡುವ ಕೆಲಸದಲ್ಲಿ ನಿಷ್ಠೆ, ಪ್ರಾಮಾಣಿಕತೆ, ಆಸಕ್ತಿ ಹಾಗೂ ಶ್ರದ್ಧೆಯನ್ನು ತೋರಿಸಿದರೆ ಜೀವನದಲ್ಲಿ ಸತ್ಫಲವನ್ನು ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ವ್ಯಕ್ತಿಯ ಆಲಸ್ಯ, ಅಶಿಸ್ತುಗಳನ್ನು ದೂರಮಾಡಿ ಪರಿಶ್ರಮ, ಪ್ರಾಮಾಣಿಕತೆ, ಶಿಸ್ತು, ಸತ್ಯನಿಷ್ಠೆ ಮುಂತಾದವನ್ನು ರೂಢಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳಬಹುದಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಮಹತ್ವದ ಸ್ಥಾನವನ್ನು ನೀಡಲಾಗಿದೆ. ತಾಯಿಯನ್ನು ಗೌರವದಿಂದ ಕಾಣಲಾಗುತ್ತದೆ. 'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ಮಾತು ತಾಯಿಯ ಕುರಿತಾಗಿರುವ ಅರ್ಥಪೂರ್ಣ ಮಾತಾಗಿದೆ. ತಾಯಿಯು ಮಗುವಿನ ಮೊದಲ ಗುರುವಾಗಿ ಮನೆಯನ್ನೇ ಪಾಠಶಾಲೆಯಾಗಿ ಮಾಡಿಕೊಂಡು ಮಗುವಿಗೆ ಮಾತು ಕಲಿಸುತ್ತಾಳೆ. ಮಕ್ಕಳ ಮೇಲೆ ಹೆತ್ತ ತಾಯಿಗೆ ಇರುವಷ್ಟು ಪ್ರೀತಿ, ಮಮತೆ, ಕನಿಕರ ಇನ್ನಾರಿಗೂ ಇಲ್ಲ. ಮಗುವಿಗೆ ತಾಯಿಯೇ ಪ್ರತ್ಯಕ್ಷ ದೇವರು.

ವ್ಯಕ್ತಿ ಎಷ್ಟೇ ಶ್ರೀಮಂತನಾಗಿರಲಿ, ಬಡವನಾಗಿರಲಿ ಆತ ಸಮಾಜ ಮುಖಿಯಾಗಿ ಬಾಳಬೇಕು. ಸಮಾಜದ ದೀನದಲಿತರ ಬಡವರ ಕಷ್ಟಕ್ಕೆ ಸಿಲುಕಿದವರ ಬಗ್ಗೆ ಪ್ರೀತಿ, ಮಮತೆಯನ್ನು ಬೆಳೆಸಿಕೊಳ್ಳಬೇಕು. ಕಷ್ಟಕ್ಕೆ ಸ್ಪಂದಿಸುವ ಮನೋಭಾವವಿರಬೇಕು. ಜೀವನಕ್ಕೆ ಅಗತ್ಯವಾದುದನ್ನು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಪ್ರತಿಷ್ಠೆ, ಸುಖಲೋಲುಪತೆ ಮುಂತಾದವನ್ನು ಬದಿಗಿಟ್ಟು ಯೋಗ್ಯವಾದುದನ್ನು ಆಯ್ಕೆಮಾಡುವ ಚಾಕಚಕ್ಯತೆಯನ್ನು ರೂಪಿಸಿಕೊಳ್ಳಬೇಕು. ಅಶೋಕ ಚಕ್ರವರ್ತಿಯು ಅಹಿಂಸಾ ಮಾರ್ಗವನ್ನು ಅನುಸರಿಸಿ ಜೀವನದಲ್ಲಿ ಅನುಭವಿಸಬೇಕಾದ ಸಕಲ ಸುಖಭೋಗಗಳನ್ನು ತ್ಯಜಿಸಿದ್ದನು. ಇವನಂತೆ ಅಹಿಂಸಾ ಮಾರ್ಗವನ್ನು ಅನುಸರಿಸಿ ಸಮಾಜದ ಉನ್ನತಿಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟ ಹಲವಾರು ಮಹಾತ್ಮರನ್ನು ಪಡೆದ ದೇಶ ನಮ್ಮದು. ಹೊಸತನ್ನು ತಿಳಿಯುವ ಆಸಕ್ತಿ ಮತ್ತು ಕುತೂಹಲವು ವ್ಯಕ್ತಿಯನ್ನು ಪ್ರಬುದ್ಧನನ್ನಾಗಿ ಮಾಡುತ್ತದೆ. ಅವನು ಸಮಾಜದಲ್ಲೂ ಗುರುತಿಸಲ್ಪಡುತ್ತಾನೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು. ಪರಿಸರದ ಬಗ್ಗೆ ಕಾಳಜಿ ಮೂಡಿಸಿಕೊಳ್ಳುವುದು, ಉತ್ತಮ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಈ ವಿಚಾರಕ್ಕೆ ಪೂರಕವಾಗಿದೆ. ಈ ಉದ್ದೇಶಗಳನ್ನು ಈಡೇರಿಸಲು ತಾಯಿ, ಹೃದಯ ಪರಿವರ್ತನೆ, ಸೌಂದರ್ಯಕ್ಕೆ ಗರಿಮೂಡಿದಾಗ ಎಂಬ ಪಾಠಭಾಗಗಳನ್ನು ಈ ಘಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಓದಿದ ಸೃಜನಾತ್ಮಕವಾದ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ಕಥೆಗಳನ್ನು ಮತ್ತು ಪರಿಚಿತವಾದ ವಸ್ತು / ಸಂದರ್ಭಗಳನ್ನು ಆಧಾರವಾಗಿರಿಸಿಕೊಂಡು ನಾಟಕ ರಚನೆ ಮಾಡುವುದು.
- ವಿಷಯ ಮತ್ತು ಸಂದರ್ಭಕ್ಕೆ ಸೂಕ್ತವಾದ ಪದಗಳು ಪ್ರಯೋಗಗಳು, ಶೈಲಿಗಳು ಎಂಬಿತ್ಯಾದಿಗಳನ್ನು ಸಂಭಾಷಣೆಯಲ್ಲಿ ಮತ್ತು ಬರವಣಿಗೆಯಲ್ಲಿ ಅಳವಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು, ಶಿಷ್ಟ ಭಾಷೆಯಲ್ಲಿ ಮಂಡಿಸುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬ ಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ, ಆಸ್ವಾದನಾ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.

# ಯೂನಿಟ್ ಗ್ರಿಡ್ – ಘಟಕ 1 : ಆದರ್ಶ ಜೀವನ

**ಸಮಯ : 20 ಪಿರೇಡುಗಳು**

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ತಾಯಿ | • ತಾಯಿಯ ಮಮತೆಯ ಕುರಿತು ಕನ್ನಡ ಸಾಹಿತ್ಯದಲ್ಲಿರುವ ಕವಿತೆಗಳನ್ನು ಗುರುತಿಸಿ ಆಸ್ವಾದಿಸುವುದು.<br>• ತಾಯಿಯ ಕುರಿತಾಗಿ ಅನೇಕ ಲೇಖಕರು ಕವಿತೆಗಳನ್ನು ಬರೆದಿದ್ದಾರೆ.<br>• ಮಮತೆ, ಪ್ರೀತಿ, ಸಹಿಷ್ಣುತೆ ಮೊದಲಾದ ಮಾನವೀಯ ಮೌಲ್ಯಗಳನ್ನು ಗಳಿಸುವುದು.<br>• ಉತ್ತಮವಾದ ಬರವಣಿಗೆಯ ಶೈಲಿಗಳನ್ನು ರೂಡಿಸಿಕೊಳ್ಳುವುದು. | • ಪದ್ಯ ಹಾಡುವುದು<br>• ಚರ್ಚಿಸುವುದು<br>• ಉತ್ತರ ಬರೆಯುವುದು<br>• ಪದ ಬಳಸುವುದು<br>• ಸಮರ್ಥಿಸಿ ಬರೆಯುವುದು<br>• ಪದ್ಯವನ್ನು ಹೋಲಿಸಿ ಟಿಪ್ಪಣಿ ಬರೆಯುವುದು<br>• ಕವನ ರಚಿಸುವುದು | • ತಾಯಿ ಕವನ<br>• ಧ್ವನಿ ಸುರುಳಿ<br>• ಪದಕೋಶ<br>• ಕವನ | • ಪ್ರಶ್ನೋತ್ತರ<br>• ಕವನ |
| ಹೃದಯ ಪರಿವರ್ತನೆ (ನಾಟಕ) | • ಅತಿ ಆಸೆಯು ದುಃಖಕ್ಕೆ ಕಾರಣವಾಗುತ್ತದೆ.<br>• ಅಹಿಂಸೆಯೇ ಪರಮಧರ್ಮ ಎಂಬುದನ್ನು ತಿಳಿಯುವುದು.<br>• ನಾಟಕವು ಜನರ ಮೇಲೆ ಪ್ರಭಾವ ಬೀರುವ ಪ್ರಮುಖ ಮಾಧ್ಯಮವಾಗಿದೆ. | • ಚರ್ಚಿಸುವುದು<br>• ಪದಗಳ ಅರ್ಥ ತಿಳಿಯುವುದು<br>• ಉತ್ತರಿಸುವುದು<br>• ಕಥೆ ಬರೆಯುವುದು<br>• ವಾರ್ತೆ ತಯಾರಿಸುವುದು<br>• ನಾಟಕದ ಅಭಿನಯ<br>• ವಾಕ್ಯ ಬದಲಾಯಿಸುವುದು | • ನಾಟಕದ ವೀಡಿಯೋ<br>• ಕಥೆ ಮಾದರಿ<br>• ವಾರ್ತೆಯ ಮಾದರಿ<br>• ನಾಟಕ | • ಕಥೆ<br>• ವಾರ್ತೆ<br>• ನಾಟಕ |

ಸಮಯ : 6 ಪಿರೇಡುಗಳು

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ಸೌಂದರ್ಯಕ್ಕೆ ಗರಿಮೂಡಿದಾಗ | • ಪ್ರತಿಯೊಬ್ಬರೂ ತಮಗಿಷ್ಟವಾದ ಉತ್ತಮ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದು.<br>• ಹವ್ಯಾಸಗಳು ಪ್ರಕೃತಿ ಮತ್ತು ಮಾನವನ ಸಂಬಂಧಗಳನ್ನು ಬಲ ಪಡಿಸುತ್ತದೆ.<br>• ಹವ್ಯಾಸಗಳನ್ನು ಆಧಾರವಾಗಿರಿಸಿದ ಸಾಹಿತ್ಯ ಕೃತಿಗಳಿವೆ.<br>• ಇತರ ಪ್ರಾಣಿ ಪಕ್ಷಿಗಳೂ ತನ್ನಂತೆಯೇ ಎಂಬುದನ್ನು ತಿಳಿದುಕೊಳ್ಳುವುದು. | • ಉತ್ತರಿಸುವುದು<br>• ಘಟನೆಯನ್ನು ಕ್ರಮೀಕರಿಸುವುದು<br>• ಬಿಟ್ಟ ಸ್ಥಳ ತುಂಬಿಸುವುದು<br>• ಪದ ಸೂರ್ಯ ರಚಿಸುವುದು<br>• ವಿವರಣೆ ತಯಾರಿಸುವುದು | • ಸಲೀಂ ಅಲಿಯವರ ಚಿತ್ರ<br>• ಸಾಧನೆಗೆ ಸಂಬಂಧಿಸಿದ ಚಿತ್ರಗಳು | • ಪ್ರಶ್ನೋತ್ತರ<br>• ವಿವರಣೆ |

# ತಾಯಿ

## ಚಟುವಟಿಕೆಗಳು

ಮಕ್ಕಳಿಗೆ ಅತ್ಯಂತ ಪ್ರೀತಿ ಪಾತ್ರಳಾದವಳು ಮತ್ತು ಅವರ ಕ್ಷೇಮಾಭ್ಯುದಯವನ್ನು ಚಿಂತಿಸುವವಳು ಅಮ್ಮ. ಅಮ್ಮನ ಬಗ್ಗೆ ಮಕ್ಕಳಿಗಿರುವ ಭಾವನೆಗಳನ್ನು ವ್ಯಕ್ತಪಡಿಸುವ ಕೆಲವು ಪ್ರಶ್ನೆಗಳ ಮೂಲಕ ಲಘು ಚರ್ಚೆ ನಡೆಸುವುದು.

- ನಿಮಗೆ ಅತ್ಯಂತ ಪ್ರೀತಿ ಪಾತ್ರರು ಯಾರು?
- ಅವರು ನಿಮಗೆ ಯಾಕೆ ಇಷ್ಟ?
- ಅವರು ನಿಮಗಾಗಿ ಏನೆಲ್ಲಾ ಮಾಡುತ್ತಾರೆ?
- ನಿಮ್ಮನ್ನು ಅತಿ ಹೆಚ್ಚು ಪ್ರೀತಿಸುವವರು ಯಾರು? ಯಾಕೆ?

## ❑ ಹಾಡಿರಿ

ವಿದ್ಯಾರ್ಥಿಗಳು ಗುಂಪಲ್ಲಿ ಕುಳಿತು ಪದ್ಯವನ್ನು ಓದಿ ರಾಗ ಸಂಯೋಜನೆ ಮಾಡಲಿ, ಯಾವ ಗುಂಪಿನವರು ಚೆನ್ನಾಗಿ ಹಾಡಿದ್ದಾರೆ ಎಂಬುದನ್ನು ಅವರೇ ನಿರ್ಧರಿಸಲಿ. ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು. ಹಾಡುವಿಕೆಯನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ಬಳಸಿದ ಸೂಚಕಗಳನ್ನು ಮಕ್ಕಳು ನಿರ್ಧರಿಸಲಿ. ಅವರು ಸೂಚಿಸಿದ ಸೂಚಕಗಳನ್ನು ಅಧ್ಯಾಪಕರು ಉತ್ತಮ ಗೊಳಿಸಿ ಕರಿಹಲಗೆಯಲ್ಲಿ ಬರೆಯಲಿ.

ಇರಬೇಕಾದ ಸೂಚಕಗಳು ಯಾವುವು?

- ಒಟ್ಟಾಗಿ ಸ್ಫುಟವಾಗಿ ಹಾಡಿದ್ದಾರೆ.
- ರಾಗ ಸಂಯೋಜನೆ ಮಾಡಿದ್ದಾರೆ.
- ಭಾವದ ಸಮರ್ಥವಾದ ಅಭಿವ್ಯಕ್ತಿ ಇದೆ.

ಬಳಿಕ ಅಧ್ಯಾಪಕರು 'ತಾಯಿ' ಪದ್ಯದ ಧ್ವನಿಮುದ್ರಿಕೆಯನ್ನು ಕೇಳಿಸುವುದು. ಮಕ್ಕಳು ಯೋಗ್ಯವಾದ ರಾಗವನ್ನು ಆಯ್ದುಕೊಳ್ಳಲಿ. ಮಕ್ಕಳಿಗೆ ಸಿ.ಡಿ.ಯೊಂದಿಗೆ ಹಾಡುವ ಅವಕಾಶವನ್ನು ನೀಡಲು ಮರೆಯದಿರುವುದು.

ಈ ಚಟುವಟಿಕೆಯ ಮೂಲಕ ಹಾದು ಹೋಗುವಾಗ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

- ಈ ಹಾಡು ಯಾರಿಗೆ ಸಂಬಂಧಿಸಿದುದಾಗಿದೆ?
- ಈ ಹಾಡು ನಿಮಗೆ ಮೆಚ್ಚುಗೆಯಾಯಿತೇ?
- ಯಾಕೆ ಮೆಚ್ಚುಗೆಯಾಯಿತು?
- ತಾಯಿಗೆ ಸರಿಸಮಾನರು ಯಾರಾದರೂ ಇದ್ದಾರೆಯೇ?

ಈ ಮೇಲಿನ ಪ್ರಶ್ನೆಗಳಿಗೆ ಮಕ್ಕಳು ಬಾಯ್ದೆರೆಯಾಗಿ ಉತ್ತರ ಹೇಳಲಿ.

## ❑ ಚರ್ಚಿಸಿರಿ

ಮಕ್ಕಳು ನಿರರ್ಗಳವಾಗಿ ಮಾತನಾಡಲು, ಅನಿಸಿಕೆಗಳನ್ನು ನಿರ್ಭಯವಾಗಿ ಹೇಳಲು, ಕವನದ ಆಶಯವನ್ನು ತಿಳಿದುಕೊಳ್ಳಲು ಚರ್ಚೆಯು ಅಗತ್ಯ. 'ತಾಯಿಯ ಪ್ರೀತಿಯು ಸಾಗರಕ್ಕಿಂತಲೂ ಆಳವಾಗಿದೆ'. ಈ ಮಾತಿನ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ತಿಳಿಯಲು ಪೂರಕವಾಗಿ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

- ತಾಯಿಯು ನಿಮ್ಮನ್ನು ಹೇಗೆ ಉಪಚರಿಸುತ್ತಾಳೆ?
- ತಾಯಿಯಂತೆ ಮಕ್ಕಳನ್ನು ಪ್ರೀತಿಸುವವರು ಜಗತ್ತಿನಲ್ಲಿ ಬೇರೆ ಯಾರಾದರೂ ಇದ್ದಾರೆಯೇ?

- ತಾಯಿಯ ಪ್ರೀತಿಯನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?

ತಾಯಿಯಂತೆ ನಮ್ಮನ್ನು ಪ್ರೀತಿಸುವವರು ಯಾರೂ ಇಲ್ಲ ಎಂಬ ತೀರ್ಮಾನಕ್ಕೆ ಬಂದ ವಿದ್ಯಾರ್ಥಿಗಳು ವಿಷಯಗಳನ್ನು ಕ್ರೋಡೀಕರಿಸಿ ಬರೆಯಲಿ. ಗುಂಪಿನಲ್ಲಿ ಮಂಡಿಸಿ ಉತ್ತಮಪಡಿಸಲಿ.

### ❑ ಉತ್ತರ ಬರೆಯಲಿ

ಪದ್ಯದ ಆಶಯವನ್ನು ಮಕ್ಕಳು ಎಷ್ಟರ ಮಟ್ಟಿಗೆ ತಿಳಿದಿದ್ದಾರೆ ಎಂದು ತಿಳಿಯುವುದೇ ಈ ಚಟುವಟಿಕೆಯ ಉದ್ದೇಶ. ಆಶಯ ಗ್ರಹಣಕ್ಕಾಗಿ ನೀಡಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಉತ್ತರ ಬರೆಯಲಿ.

### ❑ ಪದ ಬಳಸಿರಿ

ಪಠ್ಯ ಪುಸ್ತಕದಲ್ಲಿ ನೀಡಿದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳಿಗೆ ಸಮಾನವಾದ ಅರ್ಥವಿರುವ ಪದಗಳನ್ನು ಕಂಡು ಹಿಡಿಯುವ ಉದ್ದೇಶದಿಂದ ಈ ಗದ್ಯಭಾಗವನ್ನು ಕೊಡಲಾಗಿದೆ. ಮಕ್ಕಳು ಸಮಾನಾರ್ಥ ಪದಗಳನ್ನು ಪದ್ಯದಿಂದ ಆಯ್ದು ಬರೆಯಲಿ. ಬಳಿಕ ಗದ್ಯವನ್ನು ಪುನಃ ಬರೆದು ಮಂಡಿಸಲಿ.

### ❑ ಸಮರ್ಥಿಸಿ ಬರೆಯಿರಿ

ಮಕ್ಕಳು ನಿರ್ದಿಷ್ಟ ವಿಚಾರವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ತಳೆಯಲು ಸಮರ್ಥರಾಗಬೇಕು. ಈ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಸಲುವಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ. 'ತಾಯಿ' ಪದ್ಯದಲ್ಲಿ ತಮಗೆ ಇಷ್ಟವಾದ ಸಾಲುಗಳು ಯಾವುವು ಎಂದು ಗುರುತಿಸಿ ಯಾಕೆ ಇಷ್ಟವಾಯಿತೆಂಬುದನ್ನು ಸಮರ್ಥಿಸಿ ಬರೆಯಲಿ.

### ❑ ಹೋಲಿಕೆಯ ಟಿಪ್ಪಣಿ

ಮಕ್ಕಳು 'ತಾಯಿ' ಪದ್ಯದೊಂದಿಗೆ 'ಮಾತೆ ಮಮತೆ' ಪದ್ಯವನ್ನು ಹೋಲಿಸಲಿ. ಪದ್ಯವನ್ನು ಹೋಲಿಸುವಾಗ ಗಮನಿಸಬೇಕಾದ ಅಂಶಗಳುಯಾವುವು?

- ಕವಿಗಳ ಬಗ್ಗೆ ಬರೆದಿರಬೇಕು.
- ಎರಡು ಕವನಗಳಲ್ಲಿರುವ ಸಾಮಾನ್ಯ ವಿಚಾರಗಳ ಬಗ್ಗೆ ತಿಳಿಸಿರಬೇಕು.
- ಕವನಗಳಲ್ಲಿ ಇರುವ ಆಶಯ ವ್ಯತ್ಯಾಸಗಳನ್ನು ಬರೆದಿರಬೇಕು.
- ಎರಡು ಕವನಗಳ ಶೈಲಿ, ಪದ ಬಳಕೆ, ವರ್ಣನೆ, ಉಪಮೆ, ಚಮತ್ಕಾರಗಳನ್ನು ಗಮನಿಸಿಕೊಂಡು ಬರೆದಿರಬೇಕು.
- ಸರಳತೆ, ಗೇಯತೆ, ರಾಗ, ತಾಳ, ಲಯಗಳಿಗೆ ಒಗ್ಗಿಕೊಳ್ಳುವುದರ ಬಗ್ಗೆ ಬರೆದಿರಬೇಕು.

### ಮೌಲ್ಯನಿರ್ಣಯ ಸೂಚಕಗಳು

- ಹೋಲಿಕೆ ಮಾಡಿದ ವಿಚಾರಗಳು ಸ್ಪಷ್ಟವಾಗಿಯೂ ವಸ್ತುನಿಷ್ಠವಾಗಿಯೂ ಇವೆ.
- ಕವಿತೆಗಳಲ್ಲಿರುವ ಸಾಮ್ಯ ವ್ಯತ್ಯಾಸಗಳನ್ನು ಗುರುತಿಸಲಾಗಿದೆ (ಆಶಯ, ಶೈಲಿ, ವರ್ಣನೆ, ಪದ ಬಳಕೆ, ಕವಿ)
- ಆಶಯವು ಅನುಕ್ರಮವಾಗಿದೆ.
- ಯೋಗ್ಯವಾದ ಪದ ಬಳಕೆ, ಸೂಕ್ತ ಭಾಷಾ ಪ್ರಯೋಗಗಳಿರುವ ತನ್ನದೇ ಆದ ಶೈಲಿಯಲ್ಲಿದೆ.

## ಹೋಲಿಕೆಯ ಟಿಪ್ಪಣಿ ಹೀಗೂ ಇರಬಹುದಲ್ಲವೇ?

ಡಾ। ವೆಂಕಟರಾಜ ಪುಣಿಂಚಿತ್ತಾಯರು ಬರೆದ 'ತಾಯಿ ಹಾಗೂ ವಿ. ಬಿ. ಕುಳಮರ್ವ ಬರೆದ 'ಮಾತೆ – ಮಮತೆ' ಎಂಬ ಎರಡೂ ಕವನಗಳು ತಾಯಿಯ ಹಿರಿಮೆಯನ್ನು ಸಾರುತ್ತವೆ. ಇಲ್ಲಿ ತಾಯಿಯ ಲಾಲನೆ, ಪಾಲನೆಗಳನ್ನು ವರ್ಣಿಸಿರುತ್ತಾರೆ. ಎರಡೂ ಕವನಗಳು ರಾಗ, ತಾಳ, ಲಯ ಬದ್ಧವಾಗಿವೆ. ತಾಯಿ ಕವನದಲ್ಲಿ 2–4 ಗೆರೆಗಳು ವಂದನೆ ಎಂಬ ಪದದೊಂದಿಗೆ ಅಂತ್ಯವಾಗುತ್ತವೆ. 'ಮಾತೆ – ಮಮತೆ' ಎಂಬ ಪದ್ಯದಲ್ಲಿ 2–4 ಸಾಲುಗಳಲ್ಲಿ ಅಂತ್ಯಪ್ರಾಸವಿದೆ. ಎರಡೂ ಪದ್ಯಗಳು ಹಾಡಲು ಯೋಗ್ಯವಾಗಿವೆ, ಎರಡೂ ಪದ್ಯಗಳಲ್ಲಿ ತಾಯಿಯೇ ದೇವರು ಎಂಬ ಆಶಯವು ವ್ಯಕ್ತವಾಗುತ್ತದೆ. 'ತಾಯಿ' ಪದ್ಯದಲ್ಲಿ ಅಮ್ಮ ನಮ್ಮನ್ನು ತಿದ್ದಿ ತೀಡಿ, ಕೆಲಸದ ಹಿರಿಮೆಯನ್ನು ತಿಳಿಸುತ್ತಾಳೆ. ಆಕೆಗೆ ಸರಿಸಮಾನರು ಯಾರೂ ಇಲ್ಲ ಎಂಬ ಆಶಯವಿದೆ. ಮಾತೆ ಮಮತೆ ಪದ್ಯದಲ್ಲಿ ಕವಿಯು, ಜೀವನದ ಕಷ್ಟಗಳನ್ನು ಮರೆಯಲು, ಸತ್ಯದ ಹಾದಿಯಲ್ಲಿ ಸಾಗಲು, ಅಹಂಕಾರದಿಂದ ದೂರ ಉಳಿಯಲು ಅಮ್ಮನ ಪ್ರೀತಿ, ಕರುಣೆ ಅತ್ಯಗತ್ಯ ಎಂಬ ಆಶಯವನ್ನು ವ್ಯಕ್ತ ಪಡಿಸುತ್ತಾರೆ.

ಪುಣಿಂಚತ್ತಾಯರ ಕವಿತೆಯಲ್ಲಿ ಪದಪ್ರಯೋಗಗಳು ಮೇಲ್ಮಟ್ಟದಲ್ಲಿವೆ.

ಉದಾ: ತಾಯೆ ಕರುಣೆಯ ಸಿರಿಯ ಕಣಜ; ನಿನ್ನ ಹೃದಯದ ಅಗಲ ಆಗಸದಂತೆ ವಿಸ್ತರ.

## ❑ ಕವನ ರಚಿಸಿರಿ

ಅಮ್ಮನ ಬಗ್ಗೆ ಮಕ್ಕಳಿಗೆ ಕವನ ಬರೆಯುವ ಕುತೂಹಲವಿರುವುದಿಲ್ಲವೇ? ಮಕ್ಕಳು ಅಮ್ಮನ ನಿಸ್ವಾರ್ಥ ಸೇವೆಯನ್ನು, ಪ್ರೀತಿಯನ್ನು, ಆರೈಕೆಯನ್ನು ಮನದಲ್ಲಿ ಕಲ್ಪಿಸಿಕೊಂಡು ಪದ್ಯ ರಚಿಸಲಿ. ಸೂಕ್ತ ಶೀರ್ಷಿಕೆ ನೀಡಲು ಸೂಚಿಸಬೇಕು.

**ಪದ್ಯ ಹೀಗೂ ಇರಬಹುದಲ್ಲವೇ**

### ತಾಯಿಯ ಋಣ

ಅಮ್ಮ ನಿನ್ನ ಪ್ರೀತಿಯಲ್ಲಿ ಮಿಂದು ಮುಳುಗಿದೆ
ನಿನ್ನ ಪುಣ್ಯ ಮಡಿಲಿನಲ್ಲಿ ಆಡಿ ಬೆಳಗಿದೆ
ಮೂಕನಾದ ನನಗೆ ನೀನು ಮಾತು ಕಲಿಸಿದೆ
ಬೇಕು ಬೇಡವೇನು ಎಂದು ನೀನೆ ತಿಳಿಸಿದೆ
ಶುದ್ಧ ಮನಸ್ಸಿನಿಂದ ನನಗೆ ವಿದ್ಯೆ ನೀಡಿದೆ
ಬುದ್ಧಿ ಇಲ್ಲದಂಥ ನನ್ನ ತಿದ್ದಿ ತೀಡಿದೆ
ಬರಲಿ ನಿನ್ನ ಕರುಣೆ ಸದಾ ನನ್ನ ಬಾಳಿಗೆ
ಇರಲಿ ನನ್ನ ಜೀವ ಇದೋ ನಿನ್ನ ಸೇವೆಗೆ
ಎಷ್ಟು ಜನ್ಮ ಪಡೆದರೇನು ನಿನ್ನ ನೆರಳಲಿ
ಕಷ್ಟವಹುದು ನಿನ್ನ ಋಣವ ಮುಗಿಸೆ ಜಗದಲಿ
ಜನನಿ ನಿನ್ನ ರಕ್ಷೆಯಲ್ಲಿ ನನ್ನ ಜೀವನ
ಜನಿಸಿ ಮುಂದೆ ಬರುವೆ ನೀನು ಹರಸು ಈ ದಿನ

**– ಸಾಧಾರ**

❑ **ಪೂರಕ ಓದಿಗೆ**

## ಅಮ್ಮ ನೀನು ನಮಗಾಗಿ

ಅಮ್ಮ ನೀನು ನಮಗಾಗಿ
ಸಾವಿರ ವರುಷ ಸುಖವಾಗಿ
ಬಾಳಲೆ ಬೇಕು ಈ ಮನೆ ಬೆಳಕಾಗಿ
ಬಾಡದ ತಾವರೆ ಹೂವಿನ ಹಾಗೆ
ಎಂದಿಗು ಅಮರ ಜ್ಯೋತಿಯ ಹಾಗೆ
ಗೋಪುರವೇರಿದ ಕಲಶದ ಹಾಗೆ
ಆ ಧ್ರುವ ತಾರೆಯೆ ನಾಚುವ ಹಾಗೆ
ಜೊತೆಯಲಿ ಎಂದೆಂದು ನೀನಿರಬೇಕು
ಬೇರೆ ಏನು ಬೇಡೆವು ನಾವು ।।ಅಮ್ಮ।।
ಸಂಜೆಯ ಗಾಳಿಯ ತಂಪಿನ ಹಾಗೆ
ಮಲ್ಲಿಗೆ ಹೂವಿನ ಕಂಪಿನ ಹಾಗೆ
ಜೀವನ ತುಂಬುವ ಉಸಿರಿನ ಹಾಗೆ
ನಮ್ಮನು ಸೇರಿ ಎಂದಿಗು ಹೀಗೆ
ನಗುತಲಿ ಒಂದಾಗಿ ನೀನಿರಬೇಕು
ನಿನ್ನ ನೆರಳಲಿ ನಾವಿರಬೇಕು ।।ಅಮ್ಮ।।
ಸಾವಿರ ನದಿಗಳು ಸೇರಿದರೇನು
ಸಾಗರಕೆ ಸಮನಾಗುವುದೇನು
ಶತಕೋಟಿ ದೇವರು ಹರಸಿದರೇನು
ಅಮ್ಮನ ಹರಕೆಗೆ ಸರಿಸಾಟಿಯೇನು
ತಾಯಿಗೆ ಆನಂದ ತಂದರೆ ಸಾಕು
ಬೇರೆ ಪೂಜೆ ಏತಕೆ ಬೇಕು ।।ಅಮ್ಮ।।

**– ಸಾಧಾರ**

## ತಾಯಿ

ಮುಗುಳು ನಗೆಯಲಿ ನೋವ ಮರೆಸಿದ
ತಾಯಿ ನಿನಗೆ ಶರಣು
ಲಾಲಿ ಹಾಡ ಹಾಡಿ। ಸವಿಯೂಟ ನೀಡಿ
ಹಗಲು ಇರುಳು ರಕ್ಷೆಯ ನೀಡಿ
ಸಲುಹಿದೆ ಮಾತೆ । ನೀಗಿಸಿ ಚಿಂತೆ
ನೀ ಜನ್ಮದಾತೆ। ನೀ ಜನ್ಮದಾತೆ
ಬಾನಲಿ ಸಾವಿರ ತೆರೆಗಳು
ಸಾಟಿಯೆ ಹುಣ್ಣಿಮೆ ಚಂದಿರಗೆ
ಪೂಜಿಪ ಮುಕ್ಕೋಟಿ ದೈವಗಳು
ಮಿಗಿಲೇನು ಮಾತೆಯ ಪಾದಕೆ
ತಾಯಿ ನೋವನುಂಡೆ। ಕರುಳಿನ ಕುಡಿಗಾಗಿ
ಬೇಡಿದೆ ವರವನ್ನು। ಒಡಲಿನ ಮಿಡಿಗಾಗಿ
ಹರಸಮ್ಮನೀ ಇನ್ನು। ಸಲುಹಿದಾ ಮಾತೆ
ನೀ ಜನ್ಮದಾತೆ। ನೀ ಜನ್ಮದಾತೆ
ಮುಗುಳು ನಗೆಯಲಿ ನೋವ ಮರೆಸಿದೆ
ತಾಯಿ ನಿನಗೆ ಶರಣು
ನಡೆಯುತ ಎಡವಿದ ದಿನಗಳಲಿ
ಅಡೆ ತಡೆ ನೀಗಿಸಿ ಕೈ ಹಿಡಿದೆ
ಕಲಿಸುತ ಅನುದಿನ ಹೊಸ ಪಾಠ
ಕಾಣಿಸಿ ಬದುಕಿನ ಹೊಸನೋಟ
ಬಾಳಿನ ಹಾದಿಯಲಿ ಭಾಗ್ಯದ ಬೆಳಕಾದೆ
ನಾಳೆಯ ಎದುರಿಸುವ ಛಲವನು ನೀಡಿದೆ
ಬಾಳೆಲ್ಲಾ ಬಂಗಾರ ಮಾಡಿದ ಮಾತೆ ನೀ ಜನ್ಮದಾತೆ
ಸಲಹಿದ ಮಾತೇ ನೀ ಜನ್ಮದಾತೆ
ಶರಣು ನಿನಗೆ ಜನ್ಮದಾತೆ

**– ಸಾಧಾರ**

# ಹೃದಯ ಪರಿವರ್ತನೆ

ಹೃದಯ ಪರಿವರ್ತನೆ ಎಂಬ ಈ ನಾಟಕವನ್ನು ಆರಂಭಿಸುವ ಮೊದಲು ಅಧ್ಯಾಪಕರು ಕತೆಯ ಹಿನ್ನೆಲೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವುದು.

**ಹಿನ್ನೆಲೆ :** ಮೌರ್ಯ ಸಾಮ್ರಾಜ್ಯದ ಶ್ರೇಷ್ಠ ದೊರೆ ಅಶೋಕ ಮಹಾರಾಜನು 'ಬಿಂದುಸಾರ' ಹಾಗೂ 'ಧರ್ಮಾ' ರಾಜ ದಂಪತಿಗಳ ಮಗ. ಚಂದ್ರಗುಪ್ತ ಮೌರ್ಯನ ಮೊಮ್ಮಗ. ಅಶೋಕನು ಮಗಧ ರಾಜ್ಯವನ್ನು ಆಳುತ್ತಿದ್ದನು. ಆತನು ರಾಜ್ಯ ವಿಸ್ತರಣೆ ಮಾಡುವ ಮಹತ್ವಾಕಾಂಕ್ಷಿಯಾಗಿದ್ದನು. 'ಕಳಿಂಗ' ಎಂಬುದು ಮೌರ್ಯ ಸಾಮ್ರಾಜ್ಯದ ಸಮೀಪದ ಒಂದು ಸ್ವತಂತ್ರ ದೇಶವಾಗಿತ್ತು. ಅದನ್ನು ವಶಪಡಿಸುವ ಉದ್ದೇಶದಿಂದ ಅಶೋಕನು 'ಕಳಿಂಗ' ವನ್ನು ಆಕ್ರಮಿಸಿದನು. ದಯಾನದೀ ತೀರದಲ್ಲಿ ಘನಘೋರ ಯುದ್ಧ ನಡೆಯಿತು. ಅಶೋಕನು ವಿಜಯಿಯಾದನು.

ಅನಂತರದ ಭಾಗ ನಾಟಕದಲ್ಲಿ ಬರುತ್ತದೆ.

ವಿದ್ಯಾರ್ಥಿಗಳು ನಾಟಕ ರೂಪದಲ್ಲಿರುವ ಪಾಠಭಾಗವನ್ನು ಓದಲಿ.

**ಚಟುವಟಿಕೆಗಳು**

ನಾಟಕದ ಆಶಯ ಗ್ರಹಣ ಆಗಿದೆಯೋ ಎಂದು ತಿಳಿಯಲು ಪ್ರಶ್ನೆಗಳನ್ನು ಕೇಳುವುದು.

- ಈ ನಾಟಕದ ಕಥಾಪಾತ್ರಗಳು ಯಾವುವು?
- ಅಶೋಕನು ಯುದ್ಧ ಭೂಮಿಗೆ ಪ್ರವೇಶಿಸಿದುದು ಯಾಕೆ?
- ಯುದ್ಧ ಭೂಮಿಯಲ್ಲಿ ಅಶೋಕನು ಕಂಡ ದೃಶ್ಯವೇನು?
- ಅಶೋಕನ ಮನ ಪರಿವರ್ತನೆಯಾಗಲು ಕಾರಣ ವೇನು?
- ಅಹಿಂಸೆ ಎಂದರೇನು?

❑ **ಚರ್ಚಿಸಿರಿ**

ಸಾಮ್ರಾಟ ಅಶೋಕನು ಯುದ್ಧವನ್ನು ಕೈ ಬಿಟ್ಟು ಅಹಿಂಸಾ ಮಾರ್ಗವನ್ನು ಅನುಸರಿಸುವ ತೀರ್ಮಾನ ಕೈಗೊಂಡದ್ದು ಸರಿಯೇ ಎಂಬ ಪ್ರಶ್ನೆಗೆ ಮಕ್ಕಳು ತಮ್ಮ ಅಭಿಪ್ರಾಯ ಹೇಳಲಿ.

❑ **ಚರ್ಚಾ ಸೂಚಕಗಳು**

- ರಾಜನಾದವನು ಯುದ್ಧದಿಂದ ದೂರ ಉಳಿಯುವುದು ಸರಿಯೇ?
- ಅಶೋಕನ ದುಃಖಕ್ಕೆ ಕಾರಣವೇನು?
- ಅಶೋಕನು ಯಾರ ಮಾತಿನಿಂದ ಪ್ರಭಾವಿತನಾದನು?

ಹೀಗೆ ಚರ್ಚೆಯ ಮೂಲಕ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ವಿದ್ಯಾರ್ಥಿಗಳು ಬರೆಯಲಿ. ಬರೆದುದನ್ನು ಮಂಡಿಸಲಿ. ಉತ್ತಮವಾದ ಬರವಣಿಗೆಯನ್ನು ಅಭಿನಂದಿಸುವುದು. ಯಾರೇ ಆಗಲಿ, ಅತಿ ಮೋಹ, ಅನ್ಯಾಯ, ಅಹಿಂಸೆಗಳನ್ನು ಪ್ರೋತ್ಸಾಹಿಸದೆ ಎಲ್ಲರಿಗೂ ಹಿತವೆನಿಸುವ ರೀತಿಯಲ್ಲಿ ಜೀವನ ನಡೆಸಬೇಕೆಂಬ ಸದಾಶಯವು ಮಕ್ಕಳಲ್ಲಿ ಮೂಡುವಂತೆ ಚರ್ಚೆ ಕೊನೆಗೊಳ್ಳಬೇಕು.

## ❑ ಪದಗಳ ಅರ್ಥ ತಿಳಿಯಿರಿ

ಪಾಠದಲ್ಲಿ ಬರುವ ನವೀನ ಪದಗಳನ್ನು ಪಟ್ಟಿ ಮಾಡಲು ತಿಳಿಸುವುದು. ಬಳಿಕ ಅರ್ಥಕೋಶದ ಸಹಾಯದಿಂದ ಅವುಗಳಿಗೆ ಅರ್ಥವನ್ನು ಕಂಡುಕೊಂಡು ಬರೆಯಲು ತಿಳಿಸುವುದು. ಬರೆದ ಬಳಿಕ ಮಂಡಿಸಲಿ.

## ❑ ಉತ್ತರಿಸಿರಿ

ಪಾಠಪುಸ್ತಕದಲ್ಲಿ ನೀಡಿರುವ ನಾಟಕದ ಭಾಗಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು ಗಟ್ಟಿಯಾಗಿ ಹೇಳಲಿ. ಅನಂತರ ಬರೆಯಲಿ. ವಿದ್ಯಾರ್ಥಿಗಳ ಆಶಯ ಗ್ರಹಣ ಸಾಮರ್ಥ್ಯವನ್ನು ಕಂಡುಕೊಳ್ಳುವುದು ಇದರ ಉದ್ದೇಶವಾಗಿದೆ.

## ❑ ಕಥೆ ಬರೆಯಿರಿ

ಹೃದಯ ಪರಿವರ್ತನೆ ನಾಟಕವನ್ನು ಓದಿ ಆಶಯಗ್ರಹಣ ಮಾಡಿಕೊಂಡ ಬಳಿಕ ಈ ನಾಟಕವನ್ನು ಕಥಾ ರೂಪದಲ್ಲಿ ಬರೆಯಲು ಮಕ್ಕಳಿಗೆ ಸೂಚಿಸುವುದು.

ಕಥೆ ಹೇಗಿರಬೇಕು?

- ಆಶಯ ಸ್ಪಷ್ಟವಾಗಿರಬೇಕು.
- ಭಾವನೆಗಳ ನೈಜತೆ ಇರಬೇಕು.
- ಆರಂಭ, ಬೆಳವಣಿಗೆ, ಮುಕ್ತಾಯಗಳಿರಬೇಕು.
- ಕಥೆಗೆ ಸೂಕ್ತ ಶೀರ್ಷಿಕೆ ಇರಬೇಕು.

ಕಥೆಯನ್ನು ವಿದ್ಯಾರ್ಥಿಗಳು ವೈಯುಕ್ತಿಕವಾಗಿ ಬರೆದು ಮಂಡಿಸಲಿ. ಬಳಿಕ ಗುಂಪಿನಲ್ಲಿ ಕುಳಿತು ಉತ್ತಮಪಡಿಸಲಿ. ಬಳಿಕ ಅಧ್ಯಾಪಕರು ಕತೆಯನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು.

**ಕಥೆ ಹೀಗೂ ಇರಬಹುದಲ್ಲವೇ?**

# ಬದಲಾದ ಮನ

ಮೌರ್ಯವಂಶದ ಶ್ರೇಷ್ಠ ದೊರೆ ಅಶೋಕ. ಅವನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಉದ್ದೇಶದಿಂದ ಕಳಿಂಗ ರಾಜ್ಯವನ್ನು ಆಕ್ರಮಿಸಿದನು. ಕಳಿಂಗದ ಸೈನಿಕರು ಹಾಗೂ ಅಶೋಕನ ಮಗಧ ರಾಜ್ಯದ ಸೈನಿಕರ ನಡುವೆ ಘೋರ ಯುದ್ಧ ನಡೆಯಿತು. ಹಲವು ದಿನಗಳ ಸತತ ಯುದ್ಧದ ಬಳಿಕ, ಕಳಿಂಗದ ಸೈನಿಕರು ಬಳಲಿ ಬೆಂಡಾಗಿ ಪರಾಜಯದ ನೋವಿನಿಂದ ಒದ್ದಾಡುತ್ತಿದ್ದರು. ಈ ಸಂದರ್ಭದಲ್ಲಿ ಅಶೋಕನು ಶಿಬಿರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು. ಲಗುಬಗೆಯಿಂದ ಬಂದ ಸೇನಾನಾಯಕನು ವಿಜಯ ವಾರ್ತೆಯನ್ನು ಅಶೋಕನಿಗೆ ತಿಳಿಸಿದನು.

ವಿಜಯದ ಸುದ್ದಿಯನ್ನು ತಿಳಿದ ಅಶೋಕ ತನ್ನ ದಂಡ ನಾಯಕರನ್ನು ಹಾಗೂ ಸೈನ್ಯವನ್ನು ಬಹುವಾಗಿ ಕೊಂಡಾಡಿದನು. ಅವನು ದಂಡನಾಯಕರೊಡನೆ ಯುದ್ಧದಲ್ಲಿ ಸೆರೆಸಿಕ್ಕ ಸೈನಿಕರು, ಮಡಿದವರು ಹಾಗೂ ಉಳಿದವರ ಲೆಕ್ಕಾಚಾರವನ್ನು ಕೇಳಿದನು. ಯುದ್ಧದಲ್ಲಿ ಉಳಿದವರು ಯಾರೂ ಇಲ್ಲವೆಂದೂ, ಸುಮಾರು ಒಂದು ಲಕ್ಷ ಸೈನಿಕರು ಮಡಿದರೆಂದೂ ತಿಳಿದ ಅಶೋಕನು ಯುದ್ಧರಂಗ ವನ್ನು ತಾನು ನೋಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದನು. ಹೊತ್ತು ಕತ್ತಲಾದುದರಿಂದ ಅತ್ತ ಹೋಗುವುದು ಅಸಾಧ್ಯವೆಂದು ಸೇನಾನಾಯಕ ತಡೆದರೂ ಅಶೋಕನು ಆತನನ್ನು ಕೂಡಿಕೊಂಡು ರಣರಂಗದತ್ತ ತೆರಳಿದನು.

ರಣರಂಗದಲ್ಲಿ ಕಂಡ ದೃಶ್ಯಗಳಂತೂ ಅಶೋಕನ ಮನಸ್ಸನ್ನು ಜರ್ಜರಿತಗೊಳಿಸಿದುವು. ಕಳಿಂಗದ ಪ್ರಜಾಜನರು, ಆ ಕಗ್ಗತ್ತಲಲ್ಲಿ ಪಂಜಿನ ಬೆಳಕಿನಿಂದ ತಮ್ಮ ಸಂಬಂಧಿಕರ,

ಒಡಹುಟ್ಟಿದವರ ಶವಗಳನ್ನು ಅರಸುತ್ತಿದ್ದರು. ಯುದ್ಧರಂಗದ ಪ್ರತಿಯೊಂದು ದೃಶ್ಯವನ್ನು ನೋಡುತ್ತಾ ಮುಂದಡಿಯಿಡುತ್ತಿರುವಾಗ "ಇನ್ನು ಮುಂದೆ ಸಾಗಲು ಸಾಧ್ಯವಿಲ್ಲ. ಯಾಕೆಂದರೆ ಅಲ್ಲಿ ರಕ್ತದ ಹಳ್ಳಗಳಿವೆ, ಕತ್ತಲಲ್ಲಿ ಹೋದರೆ ಕಾಲು ಜಾರಿ ಬೀಳಬಹುದು'' ಎಂಬ ದಂಡನಾಯಕನ ಮಾತುಗಳನ್ನು ಕೇಳಿ ಅಶೋಕನ ಹೃದಯ ಸ್ಪಂದನವೇ ನಿಂತಂತಾಯಿತು.

ಆ ಕ್ಷಣದಲ್ಲಿ ಜೀವನ್ಮರಣ ಹೋರಾಟದಲ್ಲಿರುವ ಶತ್ರು ಸೈನಿಕನೊಬ್ಬನ ಆರ್ತನಾದವು ಅಶೋಕನ ಕಿವಿಗೆ ಬಿತ್ತು. ಆತ ದಂಡನಾಯಕನೊಡನೆ ಅತ್ತ ಧಾವಿಸಿದನು. ಮರಣ ಶಯ್ಯೆಯಲ್ಲಿದ್ದ ಆ ಸೈನಿಕನನ್ನು ವಿಚಾರಿಸಿದಾಗ ಆತನೊಬ್ಬ ಅನಾಥನೆಂದು ತಿಳಿದುಕೊಂಡನು. ಕೊನೆಗಳಿಗೆಯಲ್ಲಿ ಆತನ ಬಾಯಾರಿಕೆಯನ್ನು ಇಂಗಿಸಲು ನೀರು ತರಲು ಸೇನಾ ನಾಯಕನಿಗೆ ಆಜ್ಞಾಪಿಸಿದನು. ಸೇನಾನಾಯಕನು ನೀರು ತರುವಷ್ಟರಲ್ಲಿ ಸೈನಿಕನು ಪ್ರಾಣ ಬಿಟ್ಟನು. ಆಗ ದಂಡನಾಯಕನು "ನನ್ನ ಕೈಯ ನೀರನ್ನು ಆತ ಕುಡಿಯಲಾರ. ಯಾಕೆಂದರೆ ಕೆಲ ಕ್ಷಣಗಳ ಹಿಂದೆ ಆತನ ಎದೆಗೆ ಕಠಾರಿಯಿಂದ ತಿವಿದವನು ನಾನೇ! ನಾನು ಕಡು ಪಾಪಿ ಒಡೆಯರೇ'' ಎಂದು ದುಃಖಿಸಿದನು. ಆಗ ರಾಜಾ ಅಶೋಕನು ದಂಡನಾಯಕನನ್ನು ಸಂತೈಸುತ್ತಾ "ಪಾಪಿ ನೀನಲ್ಲ, ನಿಮ್ಮನ್ನೆಲ್ಲಾ ರಾಜಾಜ್ಞೆಯಿಂದ ಕಟ್ಟಿ ಹಾಕಿ ಈ ಕೃತ್ಯವೆಸಗಲು ನಿರ್ಬಂಧ ಹೇರಿದ ನಾನು ಪಾಪಿ" ಎಂದು ಹಲುಬಿದನು. ಅನಂತರ ಮಾತೃಭೂಮಿಯ ಉಳಿವಿಗಾಗಿ, ಗೆಲುವಿಗಾಗಿ ಹೋರಾಡಿದ ವೀರ ಯೋಧರಿಗೆ ಚಿರಶಾಂತಿ ದೊರೆಯಲು ಪ್ರಾರ್ಥಿಸಿದನು. ಹೀಗೆ ತಾನು ಮಾಡಿದ ಪಾಪ ಕೃತ್ಯವನ್ನು ನೆನೆದು ಅಶೋಕನು ತುಂಬಾ ಸಮಯದ ವರೆಗೆ ರಣರಂಗದಲ್ಲಿಯೇ ದುಃಖಿಸಿದನು.

ಆ ಸಮಯದಲ್ಲಿ ಕಳಿಂಗದೇಶದಿಂದ ಜಯಘೋಷ ಕೇಳಿಸಿತು. ಅಶೋಕನು ಕೂಡಲೇ "ಜಯಘೋಷವನ್ನು ನಿಲ್ಲಿಸಿ ಇದು ವಿಜಯೋತ್ಸವಕ್ಕೆ ಕಾಲವಲ್ಲ. ಈ ದಿನ ಪಾಟಲೀ ಪುತ್ರಕ್ಕೊಂದು ಕರಾಳ ದಿನ" ಎಂದು ಆಜ್ಞಾಪಿಸಿದನು. ದಂಡನಾಯಕನನ್ನು ಕಳುಹಿಸಿ ತಾನು ರಣರಂಗದಲ್ಲೇ ಉಳಿದನು. ತುಂಬಾ ಸಮಯದ ಬಳಿಕ ಶಿಬಿರಕ್ಕೆ ಹಿಂತಿರುಗಿದನು.

ಅಶೋಕನು ಶಿಬಿರದಲ್ಲಿ ಕುಳಿತು ಚಿಂತಾಮಗ್ನನಾಗಿದ್ದ ಸಂದರ್ಭದಲ್ಲಿ ಉಪಗುಪ್ತರೆಂಬ ಬೌದ್ಧ ಸನ್ಯಾಸಿಯೊಬ್ಬರು ಅಶೋಕನ ಭೇಟಿಗಾಗಿ ಬಂದರು. ರಾಜನು ಅವರನ್ನು ಆದರದಿಂದ ಬರಮಾಡಿಕೊಂಡನು. ತಾನು ಮಾಡಿದ ಮಹಾಪಾಪದ ಕೆಲಸವನ್ನು ಅವರೊಂದಿಗೆ ಹೇಳಿ ಪರಿಪರಿಯಾಗಿ ಹಲುಬಿದನು. ಉಪಗುಪ್ತರು ಆತನನ್ನು ಹಲವು ರೀತಿಗಳಿಂದ ಸಮಾಧಾನಪಡಿಸಲು ಯತ್ನಿಸಿದರೂ ಆತನಿಗೆ ಸಮಾಧಾನವಾಗಲಿಲ್ಲ "ನಿನ್ನ ರಾಜ್ಯಲೋಭವೇ ಈ ಅನಾಹುತಕ್ಕೆ ಕಾರಣ. ವಿವೇಕದ ಬೆಳಕಿನಲ್ಲಿ ನಡೆಯದೆ ಯಾರು ಅವಿವೇಕವೆಂಬ ಕತ್ತಲಲ್ಲಿ ನಡೆಯುವರೋ ಅವರು ಮುಗ್ಗರಿಸುವುದು ಖಂಡಿತ" ಎಂಬ ಉಪಗುಪ್ತರ ಮಾತಿಗೆ ತಲೆದೂಗಿದ ಅಶೋಕನು ''ಇನ್ನೆಂದೂ ಯುದ್ಧ ಮಾಡುವುದಿಲ್ಲ" ಎಂಬ ಪಣತೊಟ್ಟನು ಬೌದ್ಧ ಭಿಕ್ಷುವಿನ ಸಲಹೆಯಂತೆ ಹಿಂಸಾ ಮಾರ್ಗವನ್ನು ತ್ಯಜಿಸಿ ಅಹಿಂಸಾ ಮಾರ್ಗವನ್ನು ಸ್ವೀಕರಿಸಿದನು.

## ❑ ವಾರ್ತೆ ತಯಾರಿಸಿರಿ

ಮಕ್ಕಳು ಪತ್ರಿಕೆಗಳಲ್ಲಿ ಬರುವ ವಾರ್ತೆಗಳನ್ನು ಓದಿರಬಹುದು. ಇಂತಹ ವಾರ್ತೆಗಳನ್ನು ಬರೆಯುವ ರೀತಿಯನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಪತ್ರಿಕಾ ವಾರ್ತೆಯು ಒಂದು ಪ್ರಧಾನವಾದ ವ್ಯವಹಾರ ರೂಪವಾಗಿದೆ. ಮಕ್ಕಳು ಸಾಕಷ್ಟು ಪತ್ರಿಕಾ ವಾರ್ತೆಗಳನ್ನು

ಸಂಗ್ರಹಿಸಿ ಓದುವುದರ ಮೂಲಕ ಪತ್ರಿಕಾ ವಾರ್ತೆಯ ಸ್ವರೂಪವನ್ನು ತಿಳಿಯುವ ಅವಕಾಶ ಮಾಡಿಕೊಡುವುದು. ಬಳಿಕ 'ಹೃದಯ ಪರಿವರ್ತನೆ' ನಾಟಕವು ನಿಮ್ಮ ಶಾಲೆಯಲ್ಲಿ ನಡೆಯಲಿದೆ ಎಂಬ ವಾರ್ತೆಯನ್ನು ಪತ್ರಿಕೆಯಲ್ಲಿ ಪ್ರಕಟಪಡಿಸಬೇಕಾಗಿದೆ. ಪತ್ರಿಕಾ ವಾರ್ತೆಯಲ್ಲಿ ಏನೆಲ್ಲಾ ಒಳಗೊಂಡಿರಬೇಕು ಎಂಬ ಚರ್ಚೆ ನಡೆಯಲಿ.

ವಾರ್ತೆಯು ಹೇಗಿರಬೇಕು?

- ವಾರ್ತೆಗೆ ಸೂಕ್ತವಾದ ಶೀರ್ಷಿಕೆ ಇರಬೇಕು.
- ವಸ್ತುನಿಷ್ಠವಾಗಿರಬೇಕು.
- ಸ್ಥಳ ದಿನಾಂಕ ಇರಬೇಕು.
- ಮಾಹಿತಿಯು ಸರಳವಾಗಿಯೂ ಸಂಕ್ಷಿಪ್ತವಾಗಿಯೂ ಇರಬೇಕು.
- ಆಕರ್ಷಕವಾದ ಶೈಲಿ ಇರಬೇಕು

ಸಂಗ್ರಹಿಸಿದ ವಾರ್ತಾ ತುಣುಕುಗಳ ಆಧಾರದಲ್ಲಿ ನಡೆಯಲಿರುವ ಕಾರ್ಯಕ್ರಮದ ಪತ್ರಿಕಾ ವಾರ್ತೆಯನ್ನು ಮಕ್ಕಳು ವೈಯಕ್ತಿಕವಾಗಿ ರಚಿಸಲಿ. ಕೆಲವರ ಮಂಡನೆಯ ಬಳಿಕ ಗುಂಪಿನಲ್ಲಿ ಉತ್ತಮ ಪಡಿಸುವುದು. ಅಧ್ಯಾಪಕ ವಾರ್ತೆಯನ್ನು ಬರೆದು ಪ್ರದರ್ಶಿಸುವುದು.

**ಪತ್ರಿಕಾ ವಾರ್ತೆ ಹೀಗೂ ಇರಬಹುದಲ್ಲವೇ?**

**ಅಧ್ಯಾಪಕರ ದಿನಾಚರಣೆ – ನಾಟಕ ಪ್ರದರ್ಶನ**

ಕುಂಬಳೆ, ಅಗೋಸ್ತು 18: ಸರಕಾರಿ ಯು.ಪಿ.ಶಾಲೆ ಕುಂಬಳೆಯಲ್ಲಿ ಅಧ್ಯಾಪಕ ದಿನಾಚರಣೆಯ ಪ್ರಯುಕ್ತ ಶಾಲಾ ಸಾಹಿತ್ಯ ಸಭೆಯಲ್ಲಿ ಏಳನೇ ತರಗತಿಯ ವಿದ್ಯಾರ್ಥಿಗಳಿಂದ ಸೆಪ್ಟಂಬರ್ 5ನೇ ತಾರೀಕಿನಂದು ಅಪರಾಹ್ನ 3 ಗಂಟೆಗೆ 'ಹೃದಯ ಪರಿವರ್ತನೆ' ಎಂಬ ನಾಟಕವು ಪ್ರದರ್ಶನಗೊಳ್ಳಲಿದೆ. ಕನ್ನಡ ನಾಟಕ ರಂಗದಲ್ಲಿ ಪ್ರಸಿದ್ಧಿಯನ್ನು ಪಡೆದ ಶ್ರೀ. ಸದಾಶಿವ ಮಹದೇವಪ್ಪ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿರುವರು. ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಶಾಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

**❑ ನಾಟಕವನ್ನು ಶಾಲಾ ಸಾಹಿತ್ಯ ಸಭೆಯಲ್ಲಿ ಅಭಿನಯಿಸಿರಿ**

ಪತ್ರಿಕಾ ವಾರ್ತೆಯನ್ನು ನೀಡಿದ ಬಳಿಕ ನಾಟಕ ಪ್ರದರ್ಶನಕ್ಕೆ ತಯಾರಿ ನಡೆಸಬೇಡವೇ? ಅದಕ್ಕಾಗಿ ತರಗತಿಯಲ್ಲಿ ಮಕ್ಕಳನ್ನು ಗುಂಪು ಮಾಡಿ ಪಾತ್ರಗಳನ್ನು ಹಂಚಿಕೊಂಡು ತರಗತಿಯಲ್ಲಿ ನಾಟಕ ಮಾಡಿಸುವುದು. ಬಳಿಕ ಅವರಲ್ಲಿ ಉತ್ತಮವಾಗಿ ಅಭಿನಯಿಸುವವರ ಆಯ್ಕೆ ನಡೆಯಲಿ. ವೇದಿಕೆಯಲ್ಲಿ ಪ್ರದರ್ಶನ ನೀಡುವುದಕ್ಕೆ ಅಗತ್ಯವಿರುವ ಸೂಚನೆಗಳನ್ನು ಅಧ್ಯಾಪಕರು ನೀಡಬೇಕು. (ಪಾತ್ರ ಹಂಚುವುದು, ರಂಗ ಸಜ್ಜಿಕೆ, ಅಭ್ಯಾಸ ಇತ್ಯಾದಿ) ಸಾಹಿತ್ಯ ಸಭೆಯಲ್ಲಿ ನಾಟಕ ಪ್ರದರ್ಶನ ನಡೆಯಲಿ.

ನಾಟಕದಲ್ಲಿ ಏನೆಲ್ಲಾ ಇರಬೇಕು ಎಂದು ತರಗತಿಯಲ್ಲಿ ಚರ್ಚಿಸುವುದು.

ನಾಟಕದಲ್ಲಿ ಏನೆಲ್ಲಾ?

- ವಿಷಯ (ಕಥಾವಸ್ತು)
- ಸಂಭಾಷಣೆ
- ವೇದಿಕೆ
- ಹಿಮ್ಮೇಳ
- ರಂಗಸಜ್ಜಿಕೆ

- ದೃಶ್ಯ
- ಧ್ವನಿ ಬೆಳಕು
- ಪಾತ್ರ ವರ್ಗಗಳು
- ವೇಷ ಭೂಷಣಗಳು
-
-

## ❑ ಬಿಟ್ಟ ಸ್ಥಳ ತುಂಬಿಸಿರಿ

ಪಠ್ಯ ಪುಸ್ತಕದಲ್ಲಿ ನೀಡಲಾದ 'ಬಿಟ್ಟ ಸ್ಥಳ ತುಂಬಿಸಿರಿ' ಎಂಬ ಚಟುವಟಿಕೆಯನ್ನು ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ನೀಡಲಾಗಿದೆ. ಇದನ್ನು ಮನೆ ಕೆಲಸವಾಗಿಯೂ ನೀಡಬಹುದು. ಇಂತಹ ಪದಗಳನ್ನು ಪಟ್ಟಿಮಾಡಲೂ ತಿಳಿಸಬಹುದು.

## ❑ ಕೆಳಗಿನ ವಾಕ್ಯಗಳನ್ನು ಸೂಚಿಸಿದಂತೆ ಪರಿವರ್ತಿಸಿರಿ.

ವಾಕ್ಯಗಳನ್ನು ಭಾಷೆಯಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಯೋಗಿಸಲು ಸಾಧ್ಯವಾಗುತ್ತದೆ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪ್ರತಿ ವಾಕ್ಯವನ್ನು ಸೂಚಿಸಿದಂತೆ ಬದಲಾಯಿಸುವಾಗ ವಾಕ್ಯದಲ್ಲಿ ಉಂಟಾಗುವ ಬದಲಾವಣೆಯ ಕಡೆಗೆ ಮಕ್ಕಳು ಗಮನ ಹರಿಸಿದ್ದಾರೋ ಎಂದು ಖಚಿತಪಡಿಸುವುದು.

## ಪೂರಕ ಓದಿಗೆ

# ಗೋವಿನ ಹಾಡು

ಧರಣಿ ಮಂಡಲ ಮಧ್ಯದೊಳಗೆ
ಮೆರೆವುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮದನ ತಿಲಕವ ಫಣೆಯೊಳಿಟ್ಟು
ಚದುರಸಿಕೆಯನು ಹಾಕಿದ

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿ ಬರುವ ತುರುಗಳನ್ನು
ಬಳಿಗೆ ಕರೆದನು ಹರುಷದಿ

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೆ ನೀನು ಬಾರೇ
ಅಂಗನಾಮಣಿ ನೀನು ಬಾರೆಂದು
ಅಂಗವಿಸಿ ಗೊಲ್ಲ ಕರೆದನು

ಪುಣ್ಯ ಕೋಟಿಯೆ  ನೀನು ಬಾರೆ
ಪುಣ್ಯ ವಾಹಿನಿ ನೀನು ಬಾರೆ
ಪೂರ್ಣಗುಣ ಸಂಪನ್ನೆ ಬಾರೆಂದು
ನಾಣ್ಯದಿಂ ಗೊಲ್ಲ ಕರೆದನು
ಗೊಲ್ಲ ಕರೆದಾ ಧ್ವನಿಯ ಕೇಳಿ
ಎಲ್ಲ ಪಶುಗಳು ಬಂದವಾಗ
ಚೆಲ್ಲಿ ಸೂಸಿ ಪಾಲ ಕರೆದು
ಅಲ್ಲಿ ತುಂಬಿತು ಬಿಂದಿಗೆ

ಒಡನೆ ದೊಡ್ಡಿಯ ಬಿಡುತ ಪಶುಗಳು
ನಡೆದವಾಗಾರಣ್ಯಕಾಗಿ
ಕಡಲು ಮೇಘವು ತೆರಳುವಂದದಿ
ನಡೆದವಾಗಾರಣ್ಯಕೆ

ಅಟ್ಟ ಬೆಟ್ಟದ ಕಿಬ್ಬಿಯೊಳಗೆ
ಇಟ್ಟೆಡೆಯ ಬೆಟ್ಟಾದ ನಡುವೆ
ದಟ್ಟೈಸಿದಾ ಸಸಿಗಳೆಡೆಯೊಳು
ಮುಟ್ಟಿ ಮೇದವು ಹುಲ್ಲನು

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಬುತಾನೆಂತೆಂಬ ವ್ಯಾಘ್ರನು
ಗಬ್ಬಿತನದೊಳು ಬೆಟ್ಟದಾ ಅಡಿ
ಕಿಬ್ಬಿಯೊಳು ತಾನಿರುವನು

ಒಡಲಿಗೇಳು ದಿವಸದಿಂದ
ತಡೆದಾಹಾರವ ಬಳಲಿ ವ್ಯಾಘ್ರನು
ಅಡಗಿಕೊಂಡು ಗವಿಯ ಬಾಗಿಲ
ಹೊರನುಡಿಯ ಆಲಿಸುತಿರ್ದನು
ಸಿಡಿಲು ಘೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ವ್ಯಾಘ್ರನು
ತುಡುಕಿಯೆರಗಿದ ರಭಸದಿಂದೊ
ಗ್ಗೊಡೆದವಾಗಾ ಗೋವ್ಗಳು

ಅದರ ರಭಸಕೆ ನಿಲ್ಲಲರಿಯದೆ
ಕದುಬಿ ಕಮರಿಯ ಬಿದ್ದು ಪಶುಗಳು
ಪದರಿ ತಲ್ಲಣಗೊಂಡು ಪಶುಗಳು
ಚೆದರಿ ಓಡಿಹೋದವು

ಕನ್ನೆ ಮಗನ ಪಡೆದ ಪಶುವು
ತನ್ನ ಕಂದನ ನೆನೆದುಕೊಂಡು
ಪುಣ್ಯಕೋಟಿಯೆಂಬ ಪಶುವು
ಚೆನ್ನಾಗಿ ತಾ ಬರುತಿರೆ.

ಇಂದು ಎನಗಾಹಾರ ಸಂದಿತು
ಎನುತಲಾಗ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ಕೊಂಡಿತಾಗ ಪಶುವನು

ಖೂಳ ಹುಲಿಯ ಅಡ್ಡಗಟ್ಟಿ
ಬೀಳ ಹೊಯ್ವೆನು ನಿನ್ನನೆನುತಲಿ
ಸೀಳಿ ಬಿಸುಡುವೆ ಬೇಗವೆನುತ
ಪ್ರಳಯವಾಗಿಯೆ ಕೋಪಿಸೆ

ಒಂದು ಬಿನ್ನಹ ಹುಲಿಯ ರಾಯನೆ
ಕಂದನೈದನೆ ಮನೆಯ ಒಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ನಾನಿಲ್ಲಿ ನಿಲ್ಲುವೆ

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವಮಾಡಿಕೊಳ್ಳದೀಗ
ನುಸುಳಿಹೋದರೆ ನೀನು ಬರುವೆಯ
ಹಸನಾಯಿತೀಗೆಂದಿತು

ಮೂರು ಮೂರ್ತಿಗಳಾಣೆ ಬರುವೆನು
ಸೂರ್ಯ ಚಂದ್ರಮರಾಣೆ ಬರುವೆನು
ಧಾರುಣೀ ದೇವಿಯಾಣೆ ಬರುವೆನು
ಎಂದು ಭಾಷೆಯ ಮಾಡಿತು

ಬರುವೆನೆಂದು ಭಾಷೆಮಾಡಿ
ತಪ್ಪೆನೆಂದಾ ಪುಣ್ಯ ಕೋಟಿಯು
ಒಪ್ಪಿಸಲೊಡಂಬಟ್ಟು ವ್ಯಾಘ್ರನು
ಅಪ್ಪಣೆಯ ತಾ ಕೊಟ್ಟಿತು

ಅಲ್ಲಿಂದ ಕಳುಹಿಸಿಕೊಂಡು
ನಿಲ್ಲದೆ ದೊಡ್ಡಿಗೆ ಬಂದು
ಚೆಲ್ವ ಮಗನನು ಕಂಡು ಬೇಗ
ಅಲ್ಲಿ ಕೊಟ್ಟಿತು ಮೊಲೆಯನು

ಕಟ್ಟ ಕಡೆಯಲಿ ಮೇಯದೀರು
ಬೆಟ್ಟದೊತ್ತಿಗೆ ಹೋಗದೀರು
ದುಷ್ಟ ವ್ಯಾಘ್ರಗಳುಂಟು ಅಲ್ಲಿ
ನಟ್ಟನಡುವೆ ಬಾರಯ್ಯನೆ

ಕೊಂದೆನೆಂಬ ದುಷ್ಟ ವ್ಯಾಘ್ರಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನ್ನು ನೋಡಿ ಪೋಗುವೆ
ನೆಂದು ಬಂದೆನು ದೊಡ್ಡಿಗೆ

ಅಮ್ಮ ನೀನು ಸಾಯಲೇತಕೆ
ಸುಮ್ಮನಿರು ನೀ ಎಲ್ಲಾರ ಹಾಗೆ
ತಮ್ಮ ತಾಯಿಗೆ ಪೇಳಿ ಕರುವು
ಸುಮ್ಮಾನವಡಗಿ ನಿಂದಿತು

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಸರ್ವ ಬಳಗವು
ಸತ್ಯ ವಾಕ್ಯಕೆ ತಪ್ಪಿದಾರೆ
ಅಚ್ಚುತಾ ಹರಿ ಮೆಚ್ಚನು

ಆರ ಮೊಲೆಯಾ ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ಎನಗೆ ಹಿತವರು

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯೊಡಹುಟ್ಟುಗಳಿರಾ
ನಿಮ್ಮ ಕಂದನೆಂದು ಕಾಣಿರಿ
ತಬ್ಬಲಿ ಮಗನೈದನೆ

ಮುಂದೆ ಬಂದರೆ ಹಾಯದಿರಿ
ಹಿಂದೆ ಬಂದರೆ ಒದೆಯದಿರಿ
ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನೈದನೆ

ತಬ್ಬಲಿಯಾದೆಲ್ಲೊ ಮಗನೆ
ಹೆಬ್ಬುಲಿಯ ಬಾಯೀಗೆ ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಳು ಕಂದನಾ

ಕಂದನೀಗೆ ಬುದ್ಧಿ ಹೇಳಿ
ಬಂದಳಾಗ ಪುಣ್ಯ ಕೋಟಿಯು
ಚೆಂದದಿಂದ ಪುಣ್ಯ ನದಿಯೊಳು
ನಿಂದು ಸ್ನಾನವ ಮಾಡಿತು
ಗೋವು ಸ್ನಾನವ ಮಾಡಿಕೊಂಡು
ಗವಿಯ ಬಾಗಿಲು ಪೊಕ್ಕುನಿಂತು
ಸಾವಕಾಶವ ಮಾಡದಂತೆ
ವ್ಯಾಘ್ರರಾಯನ ಕರೆದಳು

ಖಂಡವಿದೆ ಕೊ ರಕ್ತವಿದೆ ಕೊ
ಗುಂಡಿಗೆಯ ಕೊಬ್ಬೂಗಳಿದೆ ಕೋ
ಉಂಡು ಸಂತಸಗೊಂಡು ನೀ ಭೂ
ಮಂಡಲದೊಳು ಬಾಳಯ್ಯನೆ

ಪುಣ್ಯಕೋಟಿಯು ಬಂದು ನುಡಿಯೆ
ತನ್ನ ಮನದೊಳು ಹುಲಿಯರಾಯನು
ಕನ್ನೆಯಿವಳು ಕೊಂದುತಿಂದರೆ
ಎನ್ನ ನರಹರಿ ಮೆಚ್ಚನು

ಎನ್ನ ಒಡಹುಟ್ಟಕ್ಕ ನೀನು
ನಿನ್ನ ತಿಂದು ನಾನೇನು ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು

ಯಾಕಯ್ಯ ಹುಲಿರಾಯ ಕೇಳು
ಜೋಕೆಯಿಂದಲಿ ಎನ್ನನೊಲ್ಲದೆ
ನೂಕಿ ನೀನು ಸಾಯಲೇತಕೆ
ಬೇಕೆಂದು ನಾ ಬಂದೆನು

ಪುಣ್ಯಕೋಟಿ ಮಾತ ಕೇಳಿ
ಕಣ್ಣಿನೊಳಗೆ ನೀರ ಸುರಿಯುತ
ಅನ್ಯಕಾರಿಯು ತಾನು ಎನುತಲಿ
ತನ್ನ ಮನದೊಳು ಧ್ಯಾನಿಸಿ

ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟು ದಿಕ್ಕ ನೋಡಿ
ಹಾರಿ ಆಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು.

**ಕೃಪೆ : ತಟ್ಟು ಚಪ್ಪಾಳೆ ಪುಟ್ಟ ಮಗು**
**(ಸಂಗ್ರಹ : ಬೊಳುವಾರು ಮಹಮ್ಮದ್ ಕುಞ್ಞಿ)**

# ಕಳಿಂಗ ಯುದ್ಧ

ಪಾಟಲೀಪುತ್ರದಲ್ಲಿ ರಾಜ್ಯವಾಳುತಲಿದ್ದ
ಮೌರ್ಯಕುಲ ಸಂಜಾತ ದೊರೆ ಆಶೋಕ।
ತನ್ನ ರಾಜ್ಯವನು ವಿಸ್ತರಿಸುವಾಸೆಯಲಿ
ದಂಡೆತ್ತಿದನು ಕಳಿಂಗಕೆ ತಂದ ಶೋಕ ॥1॥

ಅಭಿಮಾನಧನರವರು, ಆ ಕಳಿಂಗದ ಜನರು
ಜೀವನದಾಸೆಯ ಬಿಟ್ಟು ಸೆಣಸಿದರು ರಣದಿ ।
ಹೆತ್ತ ತಾಯಿಯ ಋಣವ ನೆತ್ತರಿನ ನಿಜಗುಣವ
ಬಿತ್ತಿದರು ಜಗಕೆಲ್ಲ ಸಮರದಂಗಣದಿ ॥2॥

ಎನಿತೆನಿತೊ ರಮಣಿಯರ ಮಾಂಗಲ್ಯ ಕಳಚಿತ್ತು
ಎನಿತೋ ಸುಭಟರ ಕಾಲು – ಕೈಗೆ ಮುಳುವಾಯ್ತು ॥
ಕಣ್ಣುಕಿತ್ತವರೆಷ್ಟೋ ಕಿವುಡರಾದವರೆಷ್ಟೋ?
ಮತಿ ವಿಕಲ ವಿಕಲಾಂಗರಿಂದ ನಾಡಾಯ್ತು ॥3॥

ಬಂದಿಯಾದರು ಹಲರು, ಸಂದು ಹೋದರು ಕೆಲರು
ಗಾಯದಲಿ ರಕ್ತತರ್ಪಣ ಅಯ್ಯೋ! ಪಾಪ! ॥
ಕಣ್ಣೀರು ಹಾಕುವರು ಸತ್ತ ಮಕ್ಕಳಿಗಾಗಿ
ಕೆನ್ನೀರ ಶರಧಿಯನು ನೋಡಿದನು ಭೂಪ ॥4॥

ರಕ್ತಪಾತವ ಕಂಡು ಪ್ರಾಣಿಗಳ ಬಲಿಕೊಂಡ
ದರ್ಜನನು ತಾನೆಂದು ಮರುಗಿ ಸಾಮ್ರಾಟ ॥
ಧುರವ ಗೈಯನು ಮುದೆ ಪ್ರೇಮ ಶಾಂತಿಯ ತತ್ವ
ತಿರೆಗೆ ಹರಡುವೆ ಬಾಳು ಮೂರುದಿನದಾಟ ॥5॥

ನೃಪ ಅಶೋಕನು ಮುಳುಗಿಶೋಕಸಾಗರದಲ್ಲಿ
ವಿಪರೀತ ಮತಿಗಾಗಿ ಪರಿತಪಿಸಿ ಬೆಂದ ॥
ಸ್ವಾರ್ಥಭೂತಕೆ ತಾನು ವಶವರ್ತಿ ಯಾದುದಕೆ
ಸಾರ್ಥಕ್ಯವಿಲ್ಲೆಂದು ಬಲು ತಪಿಸಿ ನಿಂದ ॥6॥

ಏಕೆ ಮಾನವ ದ್ವೇಷ, ಏಕೆಹಿಂಸೆಯ ರೋಷ
ಲೋಕಶಾಂತಿಗಾಗಿ ಹೆಣಗಲೀ ಎನ್ನ ಜೀವ ॥
ಪ್ರೀತಿಯಲಿ ಮನುಕುಲವ ಗೆಲ್ಲಬೇಕೆಂಬ ನಿಜ
ನೀತಿಯನು ಸಾರಲಿಲ್ಲವೆ ಬುದ್ದದೇವ ॥7॥

ಹೀಗೆಂದು ನಿಶ್ಚಯಿಸಿ ಕರವಾಳ ಕಿತ್ತೆಸೆದು
ಬಾಳಿದನಶೋಕ ನಿಜಭಿಕ್ಷುವಿನ ತೆರದಿ ॥
ಶಾಂತಿ ತಾರಕ ಮಂತ್ರವಿರೆ ಅಹಿಂಸೆಯ ಧರ್ಮ
ಧರೆಗೊರೆದ ಮನುಜಕುಲ ಬಾಳ್ಗೆ ಸಂತಸದಿ ॥8॥

**‘ಗುರುಶರಣ’ ರಜತಾದ್ರಿ**

**(ಮುಳಿಯ ಶಂಕರ ಭಟ್ಟ)**

## ಕರ್ತವ್ಯ ಪಾಲನೆ

ಬಹಳ ಹಿಂದೆ ನಡೆದ ಘಟನೆ ಇದು. ಆಗ ಗಾಂಧೀಜಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದರು. ಅಲ್ಲಿ ವರ್ಣಭೇದದ ವಿರುದ್ಧ ಸತ್ಯಾಗ್ರಹವನ್ನು ನಡೆಸುತ್ತಲಿದ್ದರು. ಆಗ ಗಾಂಧೀಜಿಗೆ ಮಹಾತ್ಮ ಎಂಬ ಬಿರುದು ಬಂದಿರಲಿಲ್ಲ. ಅದೇ ಸಮಯದಲ್ಲಿ ಯಾವುದೋ ಒಂದು ಕೆಲಸದ ನಿಮಿತ್ತ ಗಾಂಧೀಜಿ ಭಾರತಕ್ಕೆ ಬರಬೇಕಾಯಿತು. ಒಂದು ದಿನ ಅವರು ರೈಲಿನಲ್ಲಿ ತೃತೀಯ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡುತ್ತಲಿದ್ದರು. ಆ ಬೋಗಿಯಲ್ಲಿ ಬಹಳಷ್ಟು ಜನ, ಇತರ ಯಾತ್ರಿಕರೂ ಪ್ರವಾಸ ಮಾಡುತ್ತಲಿದ್ದರು. ಆ ಬೋಗಿಯಲ್ಲಿ ಕುಳಿತ ಯಾತ್ರಿಕನೊಬ್ಬನಿಗೆ ಉಗುಳ ಬೇಕೆಂದೆನಿಸಿತು. ಆಗ ಅವನು ಎದ್ದು ಬೋಗಿಯ ಹೊರಗೆ ಉಗುಳದೇ ಬೋಗಿಯ ನೆಲದ ಮೇಲೆ ಉಗುಳಿದನು. ಅವನು ಅಕ್ಕಪಕ್ಕದಲ್ಲಿ ಕುಳಿತ ಯಾತ್ರಿಕರು ಇದನ್ನು ನೋಡಿದರು. ಆದರೆ ಅವರೆಲ್ಲರೂ ಇದನ್ನು ನೋಡಿದರೂ ಅವರೇನು ಹೇಳಲೇ ಇಲ್ಲ ಮತ್ತು ಏನನ್ನೂ ಮಾಡಲಿಲ್ಲ. ಆದರೆ ಸಮೀಪದಲ್ಲಿಯೇ ಕುಳಿತ ಗಾಂಧೀಜಿಗೆ ಬೋಗಿಯ ನೆಲದ ಮೇಲಿದ್ದ ಉಗುಳನ್ನು ನೋಡಿ ಸಹಿಸಲು ಆಗಲಿಲ್ಲ, ಆಗ ಅವರು ತಮ್ಮಲ್ಲಿದ್ದ ಪತ್ರಿಕೆಯನ್ನು ಹರಿದು ಅದರಿಂದ ಉಗುಳನ್ನು ಚೆನ್ನಾಗಿ ಒರೆಸಿ ಹೊರಗೆ ಒಗೆದರು. ಯಾವ ವ್ಯಕ್ತಿ ಉಗುಳಿದ್ದನೋ, ಅವನಿಗೆ ಗಾಂಧೀಜಿಯ ಈ ಕೆಲಸದಿಂದ ಸಿಟ್ಟು ಬಂದಿತು. ಅವನು ಗಾಂಧೀಜಿಯ ಈ ಕೆಲಸದಿಂದ, ತಾನು ಹೊರಗೆ ಉಗುಳಬೇಕಾಗಿತ್ತು ಎಂಬ ಪಾಠ ಕಲಿಯಬೇಕಾಗಿತ್ತು. ಆದರೆ ಇದರ ಬದಲಾಗಿ ಆತ ಗಾಂಧೀಜಿ ಯಾತ್ರಿಕರೆಲ್ಲರೆದುರಿಗೆ ತನಗೆ ಅವಮಾನ ಮಾಡಲು ಹೀಗೆ ಮಾಡಿದ್ದಾರೆಂದು ತಿಳಿದುಕೊಂಡನು. ಹೀಗೆ ಯೋಚಿಸಿ ಅವನು ಪುನಃ ಬೋಗಿಯ ನೆಲದ ಮೇಲೆ ಉಗುಳಿದನು. ಗಾಂಧೀಜಿ ಪುನಃ ಕಾಗದದಿಂದ ಅದನ್ನು ಒರೆಸಿ ಹೊರಗೆ ಹಾಕಿದರು. ನಂತರ ಆ ವ್ಯಕ್ತಿ ಹಟಕ್ಕೆ ಬಿದ್ದು ಮೇಲಿಂದ ಮೇಲೆ ಬೋಗಿಯ ನೆಲದ ಮೇಲೆ ಉಗುಳ ತೊಡಗಿದನು. ಆದರೆ ಗಾಂಧೀಜಿ ಸರ್ವಸಾಮಾನ್ಯ ವ್ಯಕ್ತಿಯಾಗಿರಲಿಲ್ಲ, ಅವನ ಈ ಹಟದಿಂದ ಅವರು ವಿಚಲಿತರಾಗಲಿಲ್ಲ, ಆ ವ್ಯಕ್ತಿ ಉಗುಳಿದ ಕೂಡಲೇ ಗಾಂಧೀಜಿ ಬೇಸರಿಸದೇ ಅವನೆಷ್ಟು ಸಲ ಉಗುಳುತ್ತಾನೋ, ಅವರು ಅಷ್ಟು ಸಲ ಉಗುಳನ್ನು ಒರಸಿ ಹೊರಗೆ ಹಾಕುತ್ತಿದ್ದರು. ಅಲ್ಲಿ

ಕುಳಿತ ಯಾತ್ರಿಕರೆಲ್ಲರೂ ಆಶ್ಚರ್ಯಚಕಿತರಾಗಿ ಇದನ್ನು ನೋಡುತ್ತಲಿದ್ದರು. ಸ್ವಲ್ಪ ಹೊತ್ತಾದ ನಂತರ ಸ್ಟೇಶನ್ ಬಂದಿತು. ಪ್ಲಾಟಫಾರ್ಮಿನ ಮೇಲೆ ಅಪಾರ ಜನರು ನೆರೆದಿದ್ದರು. ಮತ್ತು 'ಗಾಂಧೀಜಿಗೆ ಜಯವಾಗಲಿ' ಎಂಬ ಘೋಷಣೆಯಿಂದ ಸಂಪೂರ್ಣ ವಾತಾವರಣವೆಲ್ಲ ಮೊಳಗುತ್ತಲಿತ್ತು. ರೈಲು ನಿಂತ ಕೂಡಲೆ ಜನರು, ಗಾಂಧೀಜಿಯಿದ್ದ ಬೋಗಿಯತ್ತ ಓಡಿ ಬರತೊಡಗಿದರು. ಗಾಂಧೀಜಿ ಬಾಗಿಲನ್ನುತೆರೆದರು ಮತ್ತು ಬಾಗಿಲ ಬಳಿ ನಿಂತುಕೊಂಡು ಕೈ ಮುಗಿದು ಜನಗಳಿಗೆ ನಮಸ್ಕಾರ ಮಾಡಿದರು. ಬೋಗಿಯಲ್ಲಿ ಉಗುಳಿದ ವ್ಯಕ್ತಿ ಇದೆಲ್ಲವನ್ನು ಹೌಹಾರಿ ನೋಡುತ್ತಲಿದ್ದನು. ನೆಲದ ಮೇಲಿದ್ದ ಉಗುಳನ್ನು ಒರೆಸಿ ಹೊರಗೆ ಹಾಕಿದ ವ್ಯಕ್ತಿ ಎಂಥ ದೊಡ್ಡ ಹಾಗೂ ಗೌರವಾನ್ವಿತನಾಗಿದ್ದಾನೆ ಎಂಬುದು ಅವನಿಗೆ ತಿಳಿಯಿತು. ತಾನು ಮಾಡಿದ್ದು ತಪ್ಪು ಎಂಬ ಅರಿವುಂಟಾಯಿತು. ಅವನು ಕೂಡಲೇ ಎದ್ದು ಗಾಂಧೀಜಿಯ ಚರಣಗಳಿಗೆರಗಿದನು. ಮತ್ತು ಮೇಲಿಂದ ಮೇಲೆ ಕ್ಷಮೆಯಾಚನೆ ಮಾಡತೊಡಗಿದನು. ಆಗ ಗಾಂಧೀಜಿಯನ್ನು ಜನತೆ ಸ್ವಾಗತಿಸುತ್ತಿದ್ದರು. ಆಕಸ್ಮಾತ್ತಾಗಿ ಕಾಲುಗಳ ಮೇಲೆ ಯಾರೋ ಬಂದು ಎರಗಿದ್ದನ್ನು ಕಂಡು ಅವರು ಅತ್ತ ಕಡೆಗೆ ದೃಷ್ಟಿ ಹರಿಸಿದರು. ಆಗ ಅವರಿಗೆ, ಆ ವ್ಯಕ್ತಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ದುಃಖವಾಗಿದೆ ಎಂಬುದು ಗೊತ್ತಾಯಿತು. ಅವರು ನಗುನಗುತ್ತ ಸಮಾಧಾನ ಪಡಿಸುತ್ತಾ ಹೇಳಿದರು.

"ಪ್ರಿಯ ಬಂಧು! (ಭಾಯಿ!) ಇದಕ್ಕೆ ಕ್ಷಮೆ ಏಕೆ? ನಾನು ನನ್ನ ಕರ್ತವ್ಯದ ಪಾಲನೆಯನ್ನು ಮಾತ್ರ ಮಾಡಿದ್ದೇನೆ. ಇಂಥ ಸಮಯ ಒದಗಿ ಬಂದಾಗ ನೀನೂ ಕೂಡ ಹೀಗೆ ಮಾಡು." ಉಗುಳುವ ವ್ಯಕ್ತಿ ಎದ್ದು ನಿಂತುಕೊಂಡ. ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು.

(ಗಾಂಧೀಜಿಯ ಆತ್ಮಕಥೆಯಿಂದ ಆಯ್ದ ಭಾಗ)

## ಸೌಂದರ್ಯಕ್ಕೆ ಗರಿ ಮೂಡಿದಾಗ

**ಚಟುವಟಿಕೆಗಳು**

ಮಕ್ಕಳು ತಮ್ಮ ಪರಿಸರದಲ್ಲಿ ಅನೇಕ ಜೀವಿಗಳನ್ನು ನೋಡಿರಬಹುದು. ಆ ಗುಂಪಿನಲ್ಲಿ ಅನೇಕ ಪಕ್ಷಿಗಳೂ ಇರಬಹುದು. ವಿದ್ಯಾರ್ಥಿಗಳು ತಾವು ನೋಡಿದ ಪಕ್ಷಿಗಳ ಪಟ್ಟಿಮಾಡಿ ಅವುಗಳ ಚಟುವಟಿಕೆಗಳ ಬಗ್ಗೆ ಬಾಯ್ದೆರೆಯಾಗಿ ಹೇಳಲಿ. ಅವುಗಳ ಕೂಗು, ಆಹಾರ ರೀತಿ, ವಾಸ ಸ್ಥಳ ಮೊದಲಾದ ವಿಚಾರಗಳ ಕುರಿತು ಪ್ರಶ್ನೋತ್ತರ ಮೂಲಕ ಲಘು ಚರ್ಚೆ ನಡೆಸಬಹುದು. ಅನಂತರ ಪ್ರಾದೇಶಿಕವಾಗಿ ಕಂಡು ಬರುವ ವಿವಿಧ ಪಕ್ಷಿಗಳ ಭಾವ ಚಿತ್ರ/ ವೀಡಿಯೋಗಳನ್ನು ಬಳಸಿಕೊಂಡ ಒಂದು ವೀಡಿಯೋವನ್ನು ಪ್ರದರ್ಶಿಸುವುದು.

- ಪಕ್ಷಿಗಳನ್ನು ವೀಕ್ಷಿಸುವುದು ಆಸಕ್ತಿದಾಯಕವಾಗಿದೆಯಲ್ಲವೇ?
- ಅವುಗಳ ಚಟುವಟಿಕೆಗಳನ್ನು ನೋಡಿದಾಗ ನಿಮಗೆ ಹೇಗೆನಿಸುತ್ತದೆ?

ಮೊದಲಾದ ಪ್ರಶ್ನೆಗಳನ್ನು ಕೇಳಬಹುದು. ಅನಂತರ ಪಕ್ಷಿಗಳ ಬಗೆಗೆ ವಿಶೇಷ ಆಸಕ್ತಿ ವಹಿಸಿ ಅವುಗಳ ಕುರಿತು ಅನೇಕ ಸಂಶೋಧನೆ ಗಳನ್ನು ನಡೆಸಿ ತನ್ನ ಜೀವನದ

ಬಹುಭಾಗವನ್ನು ಅವುಗಳ ಏಳಿಗೆಗೆ ಮುಡಿಪಾಗಿಟ್ಟ ಡಾ. ಸಲೀಂ ಅಲಿಯವರ ಬಗ್ಗೆ ಈ ಪಾತಭಾಗದಲ್ಲಿ ಹೇಳಿದ್ದಾರೆ ಎಂದು ಹೇಳುತ್ತಾ ಪಾತ ಪ್ರವೇಶ ಮಾಡಬಹುದು.

ಮಕ್ಕಳು ವೈಯುಕ್ತಿಕವಾಗಿ ಪಾತಭಾಗವನ್ನು ಓದಲಿ, ಅನಂತರ ನೀಡಿದ ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರಿಸಲಿ.

### ❑ ಉತ್ತರಿಸಿರಿ

ಪಾತಭಾಗದ ಆಶಯ ಗ್ರಹಣ ವಾಗಿದೆಯೋ ಎಂದು ತಿಳಿಯಲು ಕೆಲವು ಪ್ರಶ್ನೆಗಳನ್ನು ನೀಡಲಾಗಿದೆ. ಮಕ್ಕಳು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಬರೆಯಲಿ – ಬಳಿಕ ಮಂಡಿಸಲಿ.

### ❑ ಘಟನೆಗಳನ್ನು ಕ್ರಮೀಕರಿಸಿ ಬರೆಯಿರಿ

ವಿದ್ಯಾರ್ಥಿಗಳಲ್ಲಿ ಓದುವಿಕೆಯ ಪ್ರಕ್ರಿಯೆಯನ್ನು ಬಲಪಡಿಸುವುದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ. ಪಾತಭಾಗದಲ್ಲಿ ಈ ವಾಕ್ಯಗಳು ಬಂದ ಅನುಕ್ರಮದಲ್ಲಿ ವಾಕ್ಯಗಳನ್ನು ಬರೆಯುವುದು. ಬಳಿಕ ಮಕ್ಕಳು ಓದಲಿ ವಿದ್ಯಾರ್ಥಿಗಳು ಪರಸ್ಪರ ಮೌಲ್ಯ ನಿರ್ಣಯ ಮಾಡಲಿ.

### ❑ ಬಿಟ್ಟ ಸ್ಥಳ ತುಂಬಿಸಿರಿ

ಪದಗಳನ್ನು ಸೂಕ್ತವಾದ ರೀತಿಯಲ್ಲಿ ಹೊಸ ಸನ್ನಿವೇಶಗಳಲ್ಲಿ ಬಳಸಲು ಈ ಚಟುವಟಿಕೆಯನ್ನು ಅಳವಡಿಸಿಕೊಳ್ಳಲಾಗಿದೆ. ಅಗತ್ಯವಿದ್ದಲ್ಲಿ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿಕೊಳ್ಳಬೇಕು ಎಂಬ ವಿಚಾರಕ್ಕೆ ಅಧ್ಯಾಪಕರು ಗಮನ ಹರಿಸುವುದು. ಆವರಣದಲ್ಲಿ ಕೊಟ್ಟ ಪದಗಳನ್ನು ಯೋಗ್ಯ ರೀತಿಯಲ್ಲಿ ಬಳಸಿ ಗದ್ಯವನ್ನು ಪುನಃ ಬರೆಯಲು ತಿಳಿಸುವುದು. ಬಳಿಕ ಓದಲಿ.

ಹಕ್ಕಿಗಳಿಗೂ ಮರಗಳಿಗೂ ನಿಕಟ ಸಂಬಂಧವಿದೆ. ಕೆಲವು ಸಸ್ಯಗಳ ಹುಟ್ಟಿಗೆ ಪಕ್ಷಿಗಳು ಕಾರಣವಾಗುತ್ತವೆ ಎಂಬುದನ್ನು ವಿಜ್ಞಾನಿಗಳು ನಿರೂಪಿಸಿದ್ದಾರೆ. ಸಸ್ಯಗಳು ಹೂ ಹಣ್ಣುಗಳತ್ತ ಹಕ್ಕಿಗಳು ಬರುವಂತೆ ಪ್ರಚೋದಿಸುತ್ತವೆ. ಹಕ್ಕಿಗಳ ಸಂಪರ್ಕದಿಂದ ಕೆಲವು ಸಸ್ಯಗಳ ಹೂಗಳು ಹಣ್ಣುಗಳಾಗಿ ಬಲಿತರೆ, ಇನ್ನು ಕೆಲವು ಸಸ್ಯಗಳ ಹಣ್ಣುಗಳ ಬೀಜಗಳು ಬೇರೆಡೆಗೆ ಸಾಗಿ ಹೊಸ ಗಿಡಗಳಾಗಿ ಮೊಳೆಯುತ್ತವೆ. ಈ ರೀತಿ ಸಹಜವಾಗಿ ಬೆಳೆದ ವೃಕ್ಷಗಳು ಪಕ್ಷಿಗಳಿಗೆ ಆಶ್ರಯವನ್ನು ನೀಡುತ್ತವೆ. ಇಂದು ಸತತವಾಗಿ ಅರಣ್ಯ ನಾಶವಾಗುತ್ತಿರುವುದರಿಂದ ಪಕ್ಷಿಗಳ ಸಂತತಿಯು ಅಳಿಯುತ್ತಿದೆ. ಇದು ಕೆಲವು ವೃಕ್ಷಗಳ ಮೇಲೂ ಪ್ರಭಾವವನ್ನು ಬೀರಬಹುದು.

### ❑ ಪದಸೂರ್ಯ ರಚಿಸಿರಿ

ಪಾತಭಾಗದ ಸಹಾಯದಿಂದ ಪದಸೂರ್ಯವನ್ನು ಪೂರ್ತಿಗೊಳಿಸಲಿ. ಮಕ್ಕಳ ಪಾತಭಾಗದ ಮೂಲಕ ಪುನಃ ಹಾದು ಹೋಗಲು ಈ ಸರಳ ಚಟುವಟಿಕೆ ನೀಡಲಾಗಿದೆ.



ಈ ಪಾಠಭಾಗದ ಪ್ರಧಾನ ವ್ಯವಹಾರ ರೂಪವು ವಿವರಣೆಯಾಗಿದೆ. ವಿದ್ಯಾರ್ಥಿಗಳು ಒಂದು ವಿಷಯದ ಬಗ್ಗೆ ಸ್ಫುಟವಾಗಿ ಮಾತನಾಡಲೂ ವಿವರಣೆ ನೀಡಲೂ, ಬರೆಯಲೂ ಶಕ್ತರಾಗಬೇಕು ಎಂಬ ಉದ್ದೇಶದಿಂದ ಈ ಚಟುವಟಿಕೆಯನ್ನು ಅಳವಡಿಸಲಾಗಿದೆ.

ವಿವರಣೆ ಹೇಗಿರಬೇಕು?

- ಕ್ರಮಾನುಗತವಾಗಿರಬೇಕು
- ಆಶಯ ಸ್ಪಷ್ಟತೆಯಿರಬೇಕು
- ಉತ್ತಮ ಭಾಷಾ ಶೈಲಿ ಇರಬೇಕು

ವಿದ್ಯಾರ್ಥಿಗಳು ಪಾಠ ಪುಸ್ತಕದಲ್ಲಿ ನೀಡಿರುವ ಗುಬ್ಬಚ್ಚಿಯ ವಿವರಣೆಯನ್ನು ಓದಲಿ. ಬಳಿಕ ಅವರು ನಿರೀಕ್ಷಣೆ ನಡೆಸಿದ ಒಂದು ಪಕ್ಷಿಯ ಬಗ್ಗೆ ವಿವರಣೆ ಬರೆದು ಓದಲು ಹೇಳುವುದು. ಇದನ್ನು ಮನೆ ಕೆಲಸವಾಗಿ ನೀಡಬಹುದು. ಬಳಿಕ ಅವರು ಬರೆದ ವಿವರಣೆಗಳನ್ನು ಒಟ್ಟು ಮಾಡಿ ಸಂಚಿಕೆ ತಯಾರಿಸಲಿ, ಸೂಕ್ತ ಮುಖಪುಟ ವಿನ್ಯಾಸ ಹಾಗೂ ಶೀರ್ಷಿಕೆಯನ್ನು ನೀಡಲು ಸೂಚಿಸಿರಿ.

**ಪೂರಕ ಓದಿಗೆ**

## ಹವ್ಯಾಸಗಳು ಸೃಜನಶೀಲತೆಯ ಪಕ್ವತೆಗೊಂದು ದಾರಿ

ಪ್ರಪಂಚವು ದಿನೇ ದಿನೇ ಕಿರಿದಾಗುತ್ತಿದೆ. ಜಗತ್ತು ಸಂಕೀರ್ಣತೆಯತ್ತ ಸಾಗುತ್ತಿದೆ. ನಾವು ಅಳುವುದಕ್ಕೆ ಸಾವಿರಾರು ಕಾರಣಗಳನ್ನು ನೀಡಬಹುದಾದರೂ ನಾವು ಸಂತಸದಿಂದಿರಲೂ ವಿವಿಧ ರೀತಿಯ ಮಾರ್ಗಗಳಿವೆ. ಹವ್ಯಾಸಗಳು ನಮ್ಮ ಜೀವನದ ಕ್ಷಣಗಳನ್ನು ಸಂತಸದಾಯಕ ಕ್ಷಣಗಳನ್ನಾಗಿ ಪರಿವರ್ತಿಸುತ್ತವೆ. ಆದುದರಿಂದ ನಾವು ನಮ್ಮ ಮೆದುಳನ್ನು ಖಾಲಿ ಬಿಡಬಾರದು. ಅಲ್ಲಿ ಹವ್ಯಾಸಗಳೆಂಬ ಮಧುರ ಕ್ಷಣಗಳಿಂದ ಬದುಕನ್ನು ಹಸನುಗೊಳಿಸಿಕೊಳ್ಳಬೇಕು.

### ಓದುವಿಕೆ

ಇದೊಂದು ಆರೋಗ್ಯಕರ ಹವ್ಯಾಸವಾಗಿದ್ದು, ಮನಸ್ಸಿಗೆ ಮುದ ನೀಡುತ್ತದೆ. ಪತ್ರಿಕೆ, ಮ್ಯಾಗಝೀನ್‌ಗಳ ಓದನ್ನು ನಿರಂತರ ಅಭ್ಯಾಸ ಮಾಡಿಕೊಳ್ಳಬೇಕು. ಪ್ರೇರಣದಾಯಕ ಪುಸ್ತಕಗಳು, ಜೀವನ ಚರಿತ್ರೆಗಳು, ಕಥೆ, ಕಾವ್ಯ, ಕಾದಂಬರಿಗಳು. ಹೀಗೆ ನಿಮಗಿಷ್ಟವಾದ ಪ್ರಕಾರಗಳನ್ನು ಆರಿಸಿಕೊಳ್ಳಿ. ಓದಿನಲ್ಲಿ ಮುಳುಗಿದವರಿಗೆ ಮತ್ತೊಂದು ಪ್ರಪಂಚವೇ ಸೃಷ್ಟಿಯಾಗುತ್ತದೆ.

### ಬರೆಯುವಿಕೆ

'ಲೇಖನಿ ಕತ್ತಿಗಿಂತ ಹರಿತವಾದುದು' ಎಂಬ ಮಾತು ಜನಜನಿತ. ಲೇಖಕರು ಒಂದು ರೀತಿ ಕಾಲಾತೀತರು. ಯಾಕೆಂದರೆ, ಅವರು ಸತ್ತ ನಂತರವೂ ಅವರ ಕೃತಿಗಳು ಉಳಿಯುತ್ತವೆ. ಹೀಗಾಗಿಯೇ ಶೇಕ್ಸ್‌ಪಿಯರ್, ರನ್ನ, ಪಂಪ, ಕುವೆಂಪು, ಬೇಂದ್ರೆ ಮುಂತಾದ ಅನೇಕ ಬರಹಗಾರರು ಇಂದೂ ನಮ್ಮೊಂದಿಗೆ ಇದ್ದಾರೆ. ಎಲ್ಲರೂ ಖ್ಯಾತರಾಗುವುದು ಸಾಧ್ಯವಿಲ್ಲವಾದರೂ ನಮ್ಮ ಬರಹಗಳಿಂದ ಓದುಗರ ಸಮೂಹವನ್ನು ತಲುಪಲು ಸಾಧ್ಯವಿದೆ. ಈ ಲೇಖಕರ ಬರಹಗಳು ಇವತ್ತಿಗೂ ನಿಮ್ಮ ಸ್ಮೃತಿ ಪಟಲದಲ್ಲಿ ಉಳಿದಿಲ್ಲವೇ? ಬರವಣಿಗೆ ಲೇಖಕನ ಆತ್ಮ. ತನ್ನ ಅನಿಸಿಕೆ,

ದುಗುಡ ದುಮ್ಮಾನಗಳೆಲ್ಲದ್ದಕ್ಕೂ ಒಂದು ರೂಪ ನೀಡಲು ಬರವಣಿಗೆಯಿಂದ ಸಾಧ್ಯವಿದೆ.

### ಅಂಚೆ ಚೀಟಿಗಳ ಸಂಗ್ರಹ

ಅಂಚೆ ಚೀಟಿಗಳು ಆಯಾ ದೇಶದ ಇತಿಹಾಸವನ್ನೇ ಹಿಡಿದಿಟ್ಟುಕೊಂಡಿವೆ ಎಂದರೆ ತಪ್ಪಾಗುವುದಿಲ್ಲ. ಅವು ಆಯಾ ದೇಶದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳ ಪರಿಚಯವನ್ನು ಮಾಡಿಕೊಡುತ್ತವೆ. ಎಷ್ಟು ತೆರನಾದ ಅಂಚೆ ಚೀಟಿಗಳು ಹೊರ ಬಂದಿವೆ ಎನ್ನುವುದನ್ನು ಲೆಕ್ಕ ಇಡಲು ಸಾಧ್ಯವಿಲ್ಲ. ಆದರೆ ಸಂಗ್ರಹಕಾರರಿಗೆ ಇದೊಂದು ವಿಶಿಷ್ಟ ಹವ್ಯಾಸ, ಎಲ್ಲ ವಯೋಮಾನದವರನ್ನೂ ಇದು ಆಕರ್ಷಿಸಿದೆ. ಅಂಚೆ ಚೀಟಿಗಳ ಪ್ರದರ್ಶನವೂ ಒಂದು ವಿಶೇಷ ಅನುಭವವನ್ನು ನೀಡುತ್ತದೆ.

### ನಾಣ್ಯ ಸಂಗ್ರಹಣೆ

ಅಂಚೆ ಚೀಟಿಯಂತೆಯೇ ಅನೇಕರು ನಾಣ್ಯ ಸಂಗ್ರಹಣೆಯಲ್ಲಿ ತೊಡಗಿರುವುದನ್ನು ನೋಡುತ್ತೇವೆ. ರಾಜರು, ಚಕ್ರವರ್ತಿಗಳು, ಸರಕಾರಗಳು ಆಯಾ ಕಾಲಕ್ಕೆ ಹೊರಡಿಸಿದ ನಾಣ್ಯಗಳು ಆಯಾ ಕಾಲದ ನಾಯಕರುಗಳನ್ನು ಪರಿಚಯಿಸುತ್ತವೆ. ಆರ್ಥಿಕತೆ, ಇತಿಹಾಸ, ಸಾಂಸ್ಕೃತಿಕ, ಸಾಮಾಜಿಕ ವಿಚಾರಗಳನ್ನು ಪರಿಚಯಿಸುತ್ತವೆ. ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಅನೇಕಲೋಹಗಳ ವೈಶಿಷ್ಟ್ಯ, ಆಕಾರ, ವಿನ್ಯಾಸಗಳು ಎಂಥವರನ್ನೂ ಆಕರ್ಷಿಸುತ್ತವೆ.

### ಚಿತ್ರಕಲೆ

ಸೃಜನಶೀಲತೆಗೆ ಮತ್ತೊಂದು ಹೆಸರು ಚಿತ್ರಕಲೆ. ರಾಜಾ ರವಿವರ್ಮನಿಂದ ಹಿಡಿದು ಈಗಿನ ನಮ್ಮ ಬಿ.ಕೆ.ಎಸ್. ವರ್ಮವರೆಗೆ ಅನೇಕ ಕಲಾವಿದರು ಈ ಕಲೆಯನ್ನು ಸಮೃದ್ಧಿಗೊಳಿಸಿದ್ದಾರೆ. ಮೂರ್ತಚಿತ್ರಗಳು, ಅಮೂರ್ತ ಚಿತ್ರಗಳು, ಕಾರ್ಟೂನ್‌ಗಳು, ಪ್ರಕೃತಿ ಚಿತ್ರಗಳು ಮುಂತಾದ ಪ್ರಕಾರಗಳು ವಿವಿಧ ತೆರನಾದ ಬಣ್ಣಗಳ ಹಾಗೂ ಮಾಧ್ಯಮಗಳ ಮೂಲಕ ಜೀವ ತಳೆಯುತ್ತವೆ.

### ಹಾಡುಗಾರಿಕೆ

ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ, ಪಾಶ್ಚಾತ್ಯ ಸಂಗೀತ, ಸುಗಮ ಸಂಗೀತ..... ಹೀಗೆ ಕಲಿಯಬೇಕೆನ್ನುವವರಿಗೆ ಹಲವಾರು ಅವಕಾಶಗಳಿವೆ. ಸಂಗೀತ ದೇವ ಭಾಷೆ ಎನ್ನುತ್ತಾರೆ. ಗಾಯನದಿಂದ ಹಾಡುವವರಿಗೂ ಸಂತಸ, ಕೇಳುವವರಿಗೂ ಸಂತಸ.

### ಛಾಯಾಗ್ರಹಣ

ಛಾಯಾಗ್ರಹಣ ಇಂದು ಎಲ್ಲರಿಗೂ ಕೈಗೆ ಎಟುಕುತ್ತಿರುವ ಮಾಧ್ಯಮ. ವನ್ಯ ಜೀವಿಗಳು, ಸಾಮಾಜಿಕ ವೈರುಧ್ಯಗಳು ಇವೆಲ್ಲವನ್ನೂ ದಾಖಲಿಸಲು ಈ ಮಾಧ್ಯಮಕ್ಕೆ ಶಕ್ತಿಯಿದೆ. ಸಾವಿರ ಪದಗಳು ಹೇಳಬಹುದಾದದ್ದನ್ನು ಒಂದು ಚಿತ್ರ ಹೇಳಲು ಸಾಧ್ಯವಿದೆ.

### ಸಂಗೀತ ವಾದ್ಯಗಳು

ಪರಂಪರೆಯಿಂದ ಬಳಕೆಗೆ ಬಂದಿರುವ ಅನೇಕ ವಾದ್ಯಗಳೊಂದಿಗೆ ಆಧುನಿಕ ವಾದ್ಯಗಳು ಸಂಗೀತ ಲೋಕವನ್ನು ತಮ್ಮದೇ ಆದ ರೀತಿಯಲ್ಲಿ ವಿಸ್ತರಿಸಿವೆ. ಒಂದೊಂದು ವಾದ್ಯಕ್ಕೂ ಒಂದೊಂದು ವೈಶಿಷ್ಟ್ಯವಿದೆ. ನಿಮ್ಮನ್ನು ಸೆಳೆಯುವ ವಾದ್ಯ ಯಾವುದು ಆಲೋಚಿಸಿ ಕಲೆಯಲು ಆರಂಭಿಸಿ.

**ಸಾಹಸ ಚಟುವಟಿಕೆಗಳು**

ಬೆಟ್ಟ ಹತ್ತುವುದು, ಪಥಾನ್ವೇಷಣೆ ಮುಂತಾದ ಸಾಹಸಕಾರಿ ಚಟುವಟಿಕೆಗಳು ನಮ್ಮನ್ನು ಕ್ರಿಯಾಶೀಲರನ್ನಾಗಿಸುತ್ತವೆ. ನಮ್ಮಲ್ಲಿ ಧೈರ್ಯವನ್ನು ಇಮ್ಮಡಿಗೊಳಿಸುತ್ತವೆ. ರೋಮಾಂಚಕ ಅನುಭವವನ್ನು ನುರಿತ ತರಬೇತುದಾರರ ಸಹಯೋಗದೊಂದಿಗೆ ನಿಮ್ಮದಾಗಿಸಿಕೊಳ್ಳಿ.

**ಕ್ರೀಡೆ**

ವಾಲಿಬಾಲ್, ಟೆನಿಸ್, ಬಾಲ್ ಬ್ಯಾಡ್ಮಿಂಟನ್, ಫುಟ್‌ಬಾಲ್, ಸೈಕ್ಲಿಂಗ್, ಕ್ರಿಕೆಟ್..... ಹೀಗೆ ಹಲವಾರು ಆಯ್ಕೆಗಳು ನಮ್ಮ ಮುಂದಿದೆ. ಕ್ರೀಡೆಗಳು ಭೌತಿಕವಾಗಿ ಹಾಗೂ ಮಾನಸಿಕವಾಗಿ ನಮ್ಮನ್ನು ಸುಸ್ಥಿತಿಯಲ್ಲಿಡುತ್ತವೆ. ಹೊರಾಂಗಣ ಮತ್ತು ಒಳಾಂಗಣ ಕ್ರೀಡೆಗಳು ಎರಡೂ ತಮ್ಮದೇ ಸ್ವರೂಪವನ್ನು ಹೊಂದಿವೆ. ಕೇರಂ, ಚೆಸ್ ಮುಂತಾದವು ಇತರರೊಂದಿಗಿನ ನಮ್ಮ ಸಂಬಂಧವನ್ನು ಇಮ್ಮಡಿಗೊಳಿಸಬಲ್ಲವು.

**ಪಕ್ಷಿ ವೀಕ್ಷಣೆ**

ಪಕ್ಷಿ ವೀಕ್ಷಣೆಯೂ ಹಲವರಿಗೆ ಒಂದು ಉತ್ತಮ ಹವ್ಯಾಸವಾಗಿದೆ. ಪ್ರಪಂಚದಲ್ಲಿ ಹಲವಾರು ಪಕ್ಷಿಗಳಿದ್ದು, ಪಕ್ಷಿಲೋಕದ ಪುಟ್ಟ ಪರಿಚಯ ಮಾಡಿಕೊಡುತ್ತವೆ.

**ಪ್ರವೃತ್ತಿಯೇ ವೃತ್ತಿಯಾಗುವ ಸಾಧ್ಯತೆಯಿದೆ**

ಪ್ರಾಣ ಇದೆ ಎಂದು ಸುಮ್ಮನೆ ಬದುಕುವುದಕ್ಕಿಂತ ನಮ್ಮ ಬದುಕನ್ನು ನಮಗಿಷ್ಟದಂತೆ ರೂಪಿಸಿಕೊಂಡಾಗಲೇ ಅದಕ್ಕೊಂದು ಅರ್ಥ ಬರುತ್ತದೆ. ನಮಗೆ ಇಷ್ಟವಾಗುವ ಅನೇಕ ಹವ್ಯಾಸಗಳು ನಮ್ಮನ್ನು ಸೆಳೆದು ಆಕರ್ಷಿಸುವುದರೊಂದಿಗೆ ಮುಂದೊಂದು ದಿನ ಯಾವ ಕೆಲಸವೂ ಇಲ್ಲವೆಂದೆನಿಸಿದಾಗ ಇವೇ ಹವ್ಯಾಸಗಳು ನಮ್ಮ ಕೈ ಹಿಡಿಯುತ್ತವೆ. ಪ್ರವೃತ್ತಿಯೇ ವೃತ್ತಿಯಾಗುವ ಸಂದರ್ಭಗಳೂ ಹೆಚ್ಚಾಗುತ್ತವೆ. ಕನ್‌ಫ್ಯೂಷಿಯಸ್ ಹೇಳುವಂತೆ 'ನೀವು ಪ್ರೀತಿಸುವ ಕೆಲಸ ಆಯ್ದುಕೊಳ್ಳಿ, ನಿಮ್ಮ ಜೀವನದಲ್ಲಿ ಒಂದು ದಿನವೂ ಕೆಲಸ ಮಾಡುವ ಅಗತ್ಯ ಇರುವುದಿಲ್ಲ'.

**ಹವ್ಯಾಸಗಳಿಗೆ ಮಿತಿಯಿಲ್ಲ**

ಪ್ರವಾಸ, ಗಿಡಗಳನ್ನು ಬೆಳೆಸುವುದು, ನೃತ್ಯ ಸಾಂಸ್ಕೃತಿಕ ಚಟುವಟಿಕೆಗಳ ವೀಕ್ಷಣೆ, ಅಭಿನಯ, ಕಾರ್ಯಕ್ರಮ ನಿರೂಪಣೆ, ಕರಾಟೆ, ಯೋಗಾಭ್ಯಾಸ, ರಂಗೋಲಿ, ಗಾಳಿಪಟ...... ಹೀಗೆ ಹವ್ಯಾಸಗಳ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.

**– ಸಾಧಾರ**

# ಹಾರುವ ಹೂಗಳು

ಅಳುವ ಮಕ್ಕಳನ್ನು ಸಮಾಧಾನ ಮಾಡಿ ಊಟ ಮಾಡಿಸುವಾಗ ತಾಯಂದಿರು ಅವಕ್ಕೆ ಕಾಗಕ್ಕ ಗುಬ್ಬಕ್ಕನನ್ನು ತೋರಿಸಿ "ಆಡಾಡ ಬುತ್ತಿ ಈಡು ಮಾವಿನಕಾಯಿ, ಓಡಿ ಬಂದು ಉಣ್ಣೋ – ಕೂಸುಮರಿ" ಎಂದು ಹಾಡುವುದು ನಮ್ಮ ಕಡೆಯ ವಾಡಿಕೆ. ಹಾಗೆ ಮಾಡಿದಾಗ ಮಕ್ಕಳು ಅಳುವನ್ನು ನಿಲ್ಲಿಸುತ್ತವೆ. ಬಾಯಿ ತೆರೆದು ತುತ್ತನ್ನು ನುಂಗುತ್ತವೆ. ಎಂದಿಗಿಂತ ಸ್ವಲ್ಪ ಹೆಚ್ಚಾಗಿಯೇ ಊಟ ಮಾಡುತ್ತವೆ. ಬಹುಶಃ ಎಲ್ಲ ತಾಯಂದಿರೂ ತಮ್ಮ

ಮಕ್ಕಳನ್ನು ಹೀಗೆಯೇ ಬೆಳೆಸಿರುತ್ತಾರಾದರೂ ನಮಗಾರಿಗೂ ಅದರ ನೆನಪು ಉಳಿದಿರುವುದಿಲ್ಲ. ಅದು ನೆನಪಿಟ್ಟುಕೊಳ್ಳುವ ವಯಸ್ಸೂ ಅಲ್ಲ. ಅಂತೂ ಪುಟ್ಟ ಮಕ್ಕಳಿಗೆ ಜನಕ್ಕಿಂತ ಪಶುಪ್ರಾಣಿಗಳನ್ನು, ಹಕ್ಕಿಪಕ್ಷಿಗಳನ್ನು ನೋಡುವುದೆಂದರೆ ತುಂಬಾ ಆಸಕ್ತಿ. ಪುಟ್ಟ ಕರುವನ್ನೋ ಮೇಕೆಯ ಮರಿಯನ್ನೋ ಕಂಡಿತೆಂದರೆ ಸಾಕು, ಮಗು ಕೇಕೆ ಹಾಕಿ ನಗುತ್ತದೆ. ಒಂದು ಗುಬ್ಬಿ ಒಂದು ಕಾಗೆಯನ್ನು ಕಂಡರೂ ಅದರ ಹೃದಯ ಪ್ರಸನ್ನವಾಗುತ್ತದೆ. ನಿಜವಾಗಿ ನೋಡಿದರೆ ಪ್ರಕೃತಿ ಪ್ರೇಮ ಮನುಷ್ಯ ಸಹಜವಾದ ಗುಣ. ಮಕ್ಕಳಲ್ಲಿ ನಾವು ಅದನ್ನು ಚೆನ್ನಾಗಿ ಕಾಣುತ್ತೇವೆ. ಹತ್ತಿರದ ಹಸಿರು ಗುಡ್ಡ, ದೂರದ ನೀಲಿಯ ಬೆಟ್ಟ, ಉತ್ತರದ ಹಿಮಾಚ್ಛಾದಿತ ಪರ್ವತ, ಬಣ್ಣ ಬಣ್ಣಗಳಿಂದ ರಂಜಿಸುವ ಗಮಗಮಿಸುವ ಹೂಗಳು, ಹೂಗಳಂತೆ ಬಣ್ಣ ಬಣ್ಣವಾಗಿ ಹಾರಾಡುವ, ಹಾಡುವ ಹಕ್ಕಿಗಳು – ಇದನ್ನು ನೋಡಿ ಆನಂದಿಸುವ ಮನುಷ್ಯ ತನಗೆ ತಾನೆ ವಂಚನೆ ಮಾಡಿಕೊಳ್ಳುತ್ತಿದ್ದಾನಲ್ಲವೇ? ಮಗುವಾಗಿದ್ದಾಗ ಅವನಲ್ಲಿ ಪ್ರಖರವಾಗಿ ಕಾಣುತ್ತಿದ್ದ ಆ ಪ್ರಕೃತಿ ಪ್ರೇಮ, ಅವನು ಬೆಳೆ ಬೆಳೆದಂತೆ ಏಕೆ ಕಾಣೆಯಾಗುತ್ತದೆ? ಅದಕ್ಕೆ ಕಾರಣ ಇಷ್ಟೆ ನಮ್ಮ ಸುತ್ತಲ ಸಮಾಜ ಹಾಗಿದೆ.

ಊರು ದೊಡ್ಡ ದಾಗುತ್ತ ಪ್ರಕೃತಿ ಹಿಂದೆ ಸರಿಯುತ್ತದೆ. ಗಿಡಮರಗಳು ಒಲೆಯ ಸೌದೆಯಾಗುತ್ತವೆ. ಬೆಳೆಯುವ ಮೊದಲೇ ಹುಲ್ಲುಹಸು, ಕುದುರೆಗಳಿಗೆ ಆಹಾರವಾಗುತ್ತದೆ. ಜನ ಅದನ್ನು ಕೆರೆದೊಯ್ಯುತ್ತಾರೆ. ಆಕಾಶವನ್ನೇ ಮರೆಮಾಡಿ ಸೌಧಗಳು ಎದ್ದು ನಿಲ್ಲುತ್ತವೆ. ರಾತ್ರಿಯಲ್ಲಿ ಕತ್ತಲನ್ನೂ ಬೆಳದಿಂಗಳನ್ನೂ ಕಣ್ಣು ಗುರುತಿಸಿದ ರೀತಿಯಲ್ಲಿ ವಿದ್ಯುದ್ದೀಪಗಳು ಬೆಳಗುತ್ತವೆ.

ಹೂಗಳ ಗಂಧವಿಲ್ಲದಿದ್ದರೂ ಕಸಕಡ್ಡಿ ಕೊಚ್ಚೆ ಇವುಗಳ ದುರ್ಗಂಧ ಕಟುವಾಗಿ ಮೂಗಿನ ರಂಧ್ರಗಳನ್ನು ತಿವಿಯುತ್ತವೆ. ಇಂಥ ವಾತಾವರಣದಲ್ಲಿ ಇನ್ನು ಯಾವ ಹಕ್ಕಿ ವಾಸಮಾಡೀತು! ಊರಿನ ಜನ ನೋಡಿರಬಹುದಾದ ಹಕ್ಕಿಗಳೆಂದರೆ ಎರಡೆ – ಗುಬ್ಬಿ, ಕಾಗೆ, ತಪ್ಪಿದರೆ ಗೊರವಂಕಗಳು. ಹಿಂದಿನವರು ಮನೆ ಕಟ್ಟುವಾಗ ಹೊರಗೋಡೆಯಲ್ಲಿ ಎರಡೂ ಕಡೆ ಹಕ್ಕಿಗಳಿಗಾಗಿ ಎರಡು ಗೂಡುಗಳನ್ನು ಮಾಡಿಸುತ್ತಿದ್ದರು. ಅಲ್ಲಿ ಗೊರವಂಕಗಳು ಸೇರಿಕೊಳ್ಳುತ್ತಿದ್ದವು. ಈಗಿನ ತಾರಸಿ ಮನೆಗಳಲ್ಲಿ ಗೊರವಂಕಗಳಿಗೆ ಸ್ಥಳವೆಲ್ಲಿದೆ?

ಹಕ್ಕಿಗಳನ್ನು ನೋಡಬೇಕು. ನೋಡುವ ಕುತೂಹಲವನ್ನು ಬೆಳೆಸಿಕೊಳ್ಳಬೇಕು. ಹಕ್ಕಿ ಹೇಗಿದೆ? ಬಣ್ಣವೇನು? ಗಾತ್ರವೇನು? ಅದರ ಆಹಾರವೇನು? ಎಲ್ಲಿ ವಾಸ ಮಾಡುತ್ತೆ? ಅದರ ಹೆಸರೇನು? ಹೇಗೆ ಕೂಗುತ್ತೆ? ಎಷ್ಟು ಮೊಟ್ಟೆ ಇಡುತ್ತೆ? ಮರಿ ಹೇಗಿರುತ್ತೆ? ಹೀಗೆ ಆಲೋಚನೆ ಮಾಡುತ್ತಾ ಹೋದರೆ ಅದೇ ನಮಗೊಂದು ಹವ್ಯಾಸವಾಗುತ್ತದೆ. ಅಹ! ಎಂಥ ಹವ್ಯಾಸ! ಎಷ್ಟು ಸುಖ ಅದರಿಂದ! ಯಾವ ಸಿನಿಮಾ, ಯಾವ ನಾಟಕ, ನೋಡುವುದರಿಂದ ಅಂಥ ಸಂತೋಷವಾಗಬಲ್ಲದು? ಆ ಮನೋಧರ್ಮ ಬೆಳೆದರೆ ಸಾಕು ನಮಗೆ ಸಾಧಾರಣವಾದ ಗುಬ್ಬಿ ಕಾಗೆಗಳು ವಿಶೇಷದ ವಸ್ತುಗಳಾಗುತ್ತವೆ. ಕಾಡು ಗುಬ್ಬಿಯ ಅಂಗಸೌಷ್ಠವ, ತೀಕ್ಷ್ಣವಾದ ಕಂದು ಬಣ್ಣ, ಚುರುಕಾದ ಕೂಗು, 'ಸುಟಿಯಾದ ಹಾರಾಟ' ಇವುಗಳು ರಮ್ಯವಾಗಿ ಕಾಣುತ್ತವೆ.

ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದು ಹೊರಗೆ ಒಂದು ನಿಂತರಾಯಿತು. ಆಗಲೆ ಹಕ್ಕಿಗಳು ಎದ್ದಿರುತ್ತವೆ. ಚಿಲಿಪಿಲಿ ಗುಟ್ಟುತ್ತಿರುತ್ತವೆ. ಎದುರಿನ ಲಂಟಾನದ ಪೊದೆಯಲ್ಲಿ ಕರಿಗುಬ್ಬಿಯೊಂದು ಚಟ್‌ಚಟ್ ಎಂದು ಕುಪ್ಪಳಿಸುತ್ತದೆ. ಹೊಳೆಯುವ ಮುತ್ತಿನಂಥ ಅದರ ಕಣ್ಣು ನಮ್ಮನ್ನಾಗಲೆ

ಗುರುತಿಸುತ್ತದೆ. ನಿಮಿಷದಲ್ಲಿ ಗುಬ್ಬಿ ಮರೆಯಾಗುತ್ತದೆ. ಪಿಂಗ್‌ಪಾಂಗ್ ಚೆಂಡಿನಷ್ಟೆ ಪುಟ್ಟದಾದ ಮಂದವಾದ ಹಸಿರು ಮೈಯ ಬಂಡುಣಿಹಕ್ಕಿ ಅಗೋ ಅಲ್ಲಿ ಚಟ್‌ಚಟ್ ಎಂದು ರೆಂಬೆಯಿಂದ ರೆಂಬೆಗೆ ನೆಗೆಯುತ್ತ ಪ್ರತಿಯೊಂದು ಹೂವಿನಲ್ಲೂ ತನ್ನ ಸೂಜಿಯಂಥಾ ಕೊಕ್ಕನ್ನಿಟ್ಟು ಸೀ ಉಣ್ಣುತ್ತಿದೆ. ಎರಡು ಗೊರವಂಕಗಳು ಎತ್ತರದ ಅಗಸೆಯ ಮರದ ರೆಂಬೆಯಲ್ಲಿ ಕುಳಿತು ಚೀವ್ ಚೀವ್ ಎಂದು ಕೂಗುತ್ತಿವೆ. ದೂರದ ಮಣ್ಣು ನೆಲದಲ್ಲೊಂದು ಮರಕುಟಿಗ. ಇನ್ನೂ ಸ್ವಲ್ಪ ದೂರದಲ್ಲಿ ಇನ್ನೊಂದು. ಮೈ ಎಲ್ಲ ಮಣ್ಣಿನ ಬಣ್ಣವೆ. ಮೇಲೆ ರೆಕ್ಕೆಗೆ ಅಡ್ಡವಾಗಿ ಕಪ್ಪು ಪಟ್ಟಿಗಳು. ತಲೆಯಲ್ಲೊಂದು ಕಿರೀಟ, ತನ್ನ ಪಿಕಾಸಿಯಂಥಾ ಕೊಕ್ಕಿನಿಂದ, ಮಂಜಿನಲ್ಲಿ ನೆನೆದ ನೆಲವನ್ನು ಅಗೆದು ಗೆದ್ದಲು ಹುಳುಗಳನ್ನು ತಿನ್ನುತ್ತಿದೆ. ಪುಟ ಪುಟ ಪುಟ ಎಂದ ಸರಸರನೆ ಹೆಜ್ಜೆ ಹಾಕುತ್ತಿದೆ. ಕತ್ತೆತ್ತಿ ನೋಡಿದರೆ ಕ್ಷಣಕ್ಕೊಮ್ಮೆ ಹಿಂಡು ಹಿಂಡಾದ ಬೆಳ್ಳಕ್ಕಿಗಳ ಸಾಲುಗಳು. ಬೆಳ್ಳಕ್ಕಿ ಒಂದು ಬಗೆಯ ನೀರಹಕ್ಕಿ. ಹೊಲ ಗದ್ದೆ ತೋಟಗಳು ಇದ್ದಲ್ಲಿ ಅದು ಇರುತ್ತದೆ. ಮೈಸೂರಿನಲ್ಲಿ ಇವತ್ತಿಗೂ ಸಾವಿರಾರು ಬೆಳ್ಳಕ್ಕಿಗಳು ಪ್ರಾತಃಕಾಲದಲ್ಲಿ ಊರನ್ನು ದಾಟಿ ಹಾರಿ ಹೋಗುತ್ತಿರುವುದನ್ನು ನೋಡಬಹುದು. ದಾಟಿ ಹಾರಿ ಹೋಗುತ್ತವೆ, ಅಷ್ಟೆ. ಊರಿನಲ್ಲಿ ಅವಕ್ಕೇನು ಕೆಲಸ. ಹಾರುವಾಗ ಅವುಗಳನ್ನು ನೋಡಬೇಕು. ಮುಗಿಲ ಮಂಟಪಕ್ಕೆ ಕಟ್ಟಿದ ತೋರಣದಂತೆ ಕಾಣುತ್ತವೆ. ಇಲ್ಲವೆ ಯಾರೋ ತಮ್ಮ ಎರಡೂ ತೋಳುಗಳನ್ನು ಚಾಚಿದಂತೆ ಕಾಣುತ್ತವೆ. 'ಅಲ್ಲಿ ಹಾರಿಹೋಗುತ್ತಿರುವುದು ಬೆಳ್ಳಕ್ಕಿಯ ಸಾಲಲ್ಲ. ಅದು ಸರ್ವಶಕ್ತನಾದ ದೇವರು ಮಾಡಿದ ರುಜು' ಎಂದು ಉದ್ಗಾರ ತೆಗೆದಿರುವ ಕವಿ ಕುವೆಂಪು ಅವರ ದರ್ಶನ ಎಷ್ಟು ರೋಮಾಂಚಕಾರಿಯಾಗಿದೆ! ಹೊಳೆಯ ದಂಡೆಯ ಬೋಳುಗಿಡದ ನೂರಾರು ತುದಿಗೋಡುಗಳಲ್ಲಿ ಬಂದು ಕೂಡುವ ಬೆಳ್ಳಕ್ಕಿಗಳನ್ನು ಹಠಾತ್ತನೆ ನೋಡಿದರೆ ಗಿಡ ಹೂ ಬಿಟ್ಟಂತೆ ಕಾಣುತ್ತದೆ.

ಸಂಜೆಯಾಯಿತೆಂದರೆ ಇನ್ನೊಂದು ರೀತಿಯ ಸೊಗಸು. ಅದು ಹಕ್ಕಿಗಳು ಮನೆ ಸೇರುವ ಹೊತ್ತು. ಹೊತ್ತು ಮುಳುಗುತ್ತಲಿದೆ, ಕತ್ತಲಾಗುತ್ತಲಿದೆ, ಎತ್ತಲೂ ಕಾಗೆಗಳು ಗೂಡಬಳಿಗೆ...... ಮರ ಸೇರಿದ ಹಕ್ಕಿಗಳು ಮಾಡುವ ಅವಾಂತರ ವರ್ಣನಾತೀತ.

ಹಕ್ಕಿಗಳೆಲ್ಲ ಹಾರುತ್ತವಾದರೂ ಒಂದರಂತೆ ಇನ್ನೊಂದು ಹಾರುವುದಿಲ್ಲ. ಹದ್ದು ವೈಮಾನಿಕ ಗೂಢಚಾರನಂತೆ ಮುಗಿಲೆತ್ತರಕ್ಕೆ ಹಾರಿ ಅಲ್ಲಿ ಗಸ್ತು ಹೊಡೆಯುತ್ತಿರುತ್ತದೆ. ಮಕ್ಕಳು ಹಾರಿಬಿಟ್ಟ ಗಾಳಿಪಟದಂತೆ, ಸಂಜೆ ಏಳಾದರೂ ಅದು ಕೆಳಕ್ಕೆ ಇಳಿಯುವುದೇ ಇಲ್ಲ. ಗಿಡುಗ ಅದೇ ಜಾತಿಯದಾದರೂ ಅದರ ರೀತಿಯೇ ಬೇರೆ. ಅದು ಬೇಟೆಗಾರನ ಬಾಣದಂತೆ ತೂರಿ ಹಾರುತ್ತದೆ. ಗುಬ್ಬಿಯ ಹಾರಾಟವೆಲ್ಲ ಮನೆಯ ಸುತ್ತಮುತ್ತಲೆ, ಮನೆಯ ಎತ್ತರದಲ್ಲೆ. ಪಾರಿವಾಳ ಪಳಗಿದದೊಂಬನಂತೆ ಆಕಾಶದಲ್ಲಿ ಲಾಗ ಹಾಕುವುದನ್ನು ನೋಡಲು ಬಲುಚೆಂದ. ಮೈ ಬಹು ಭಾರವಾಗಿದ್ದರೂ ನವಿಲು ತೆಂಗಿನ ಮರದ ಎತ್ತರಕ್ಕೆ ಹಾರುತ್ತದೆ. ಅದೇ ಕೋಳಿ ಹಾರುವುದನ್ನೇ ಮರೆತು ಬಿಟ್ಟಿದೆ.

ಈಚೆಗೆ ಹತ್ತಾರು ವರ್ಷಗಳಿಂದ ನನ್ನ ಕುತೂಹಲವನ್ನು ಕೆರಳಿಸಿ ಮನಸ್ಸನ್ನೆಲ್ಲ ತಮ್ಮ ಕಡೆ ಎಳೆದುಕೊಂಡಿರುವ ಹಕ್ಕಿಗಳೆಂದರೆ ಒಂದು ಮಿಂಚುಳ್ಳಿ. ಇನ್ನೊಂದು ಗಿಳಿ ಮಿಂಚುಳ್ಳಿಯನ್ನು ಅನೇಕರು ನೋಡಿದ್ದಾರೆ. ಅದು ನೀರು ತಡಿಯ ಹಕ್ಕಿ. ಕೆರೆ ಕಟ್ಟೆಗಳ ಬಂಡೆಗಳ ಮೇಲೆ ಕೂತಿದ್ದು ಆಗಾಗ್ಗೆ ಅದು ನೀರ ಮೇಲೆ ಹಾರುತ್ತದೆ. ಹಾರುತ್ತ ಹಾರುತ್ತ ಹೆಲಿಕಾಪ್ಟರ್ ಹಾಗೆ ಆಕಾಶದ ಅವಕಾಶದಲ್ಲಿ ಕ್ಷಣ

ಹೊತ್ತು ಪಟಪಟನೆ ರೆಕ್ಕೆ ಬಡಿಯುತ್ತ ನಿಂತಿದ್ದು, ಮೀನು ನೀರಿನ ತಳದಿಂದ ಮೇಲಕ್ಕೆ ಬಂದಾಗ ಸುಯ್ ಎಂದು ನೀರಿನಲ್ಲಿ ಮುಳುಗಿ ಮೀನನ್ನು ತನ್ನ ಬಲವಾದ ಕೊಕ್ಕಿನಿಂದ ಕಚ್ಚಿಕೊಂಡು ಹಾರಿ ಹೋಗುತ್ತದೆ. ಮಿಂಚುಳ್ಳಿಯಲ್ಲಿ ಅನೇಕ ಉಪ ಜಾತಿಗಳಿವೆ. ಕೆಲವು ಪಾರಿವಾಳದಷ್ಟು ದೊಡ್ಡದಾಗಿರುತ್ತವೆ. ಕೆಲವು ಗೊರವಂಕನಷ್ಟು ಚಿಕ್ಕದಾಗಿರುತ್ತವೆ. ಮೈ ಬಣ್ಣ ಕಂದು ನೀಲಿ, ಬಿಳುಪು, ಹಳದಿ – ಎಲ್ಲ ಮಿಶ್ರ. ಕತ್ತಿನ ಭಾಗ ಬೆಳ್ಳಗಿರುತ್ತದೆ. ಕೆಲವಕ್ಕೆ ಕಂದು ಬಣ್ಣವೇ ಹೆಚ್ಚು. ಕೆಲವಕ್ಕೆ ನೀಲಿ, ಹಸಿರು ಹೆಚ್ಚು. ಸೂರ್ಯನ ಬೆಳಕು ಮೇಲೆ ಬಿದ್ದಾಗ ಇದು ಪಳಪಳನೆ ಹೊಳೆಯುತ್ತದೆ. ಹಾರುವಾಗಲಂತೂ ಇದು ಹೊಳೆಯುವ ಬಣ್ಣದ ಉಂಡೆಯಂತೆ ಕಾಣುತ್ತದೆ. ಇಂಗ್ಲಿಷ್‌ನಲ್ಲಿ ಈ ಹಕ್ಕಿಯನ್ನು 'ಕಿಂಗ್ ಫಿಷರ್' ಎನ್ನುತ್ತಾರೆ. ನೋಡುವ ಕಣ್ಣಿಗೆ ರಸಾನುಭವ ಶಕ್ತಿ ಇದ್ದರೆ ಹೂಗಳು ಹಕ್ಕಿಗಳಂತೆ ಕಾಣುತ್ತವೆ. ಹಕ್ಕಿಗಳೋ – ಹಾರುವ ಹೂಗಳಾಗಿ ಕಾಣುತ್ತವೆ!

**ಎನ್. ಪ್ರಹ್ಲಾದರಾವ್**

## ಮೌಲ್ಯನಿರ್ಣಯ ಚಟುವಟಿಕೆಗಳು

### ಚಟುವಟಿಕೆ 1

ವೆಂಕಟರಾಜ ಪುಣಿಂಚತ್ತಾಯರ 'ತಾಯಿ' ಕವನವನ್ನು ಓದಿ ತಾಯಿಯ ಮಮತೆಯನ್ನು ಅರಿತಿದ್ದೀರಿ ತಾನೇ? 'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ಗಾದೆ ಮಾತಿನಲ್ಲಿ ವ್ಯಕ್ತವಾಗುವ 'ಮಾತೆಯ ಮಹತ್ವ'ದ ಕುರಿತಾಗಿ ಟಿಪ್ಪಣಿಯನ್ನು ಬರೆಯಿರಿ.

### ಚಟುವಟಿಕೆ 2

ಕಳಿಂಗದೊಂದಿಗೆ ಯುದ್ಧ ನಡೆಸಿದ ಅಶೋಕನ ಮನಸ್ಸು ಉಪಗುಪ್ತನ ಆಗಮನದಿಂದಾಗಿ ಪರಿವರ್ತನೆಯಾಯಿತು ಎಂಬುದನ್ನು 'ಹೃದಯ ಪರಿವರ್ತನೆ' ನಾಟಕವನ್ನೋದಿ ತಿಳಿದು ಕೊಂಡಿರುವಿರಿ. ಒಂದು ವೇಳೆ ಉಪಗುಪ್ತನ ಆಗಮನವಾಗದೇ ಇರುತ್ತಿದ್ದರೆ..... ಏನಾಗಬಹುದಿತ್ತು ಎಂಬುದನ್ನು ಊಹಿಸಿ ಬರೆಯಿರಿ.

### ಚಟುವಟಿಕೆ 3

ನಿಮ್ಮ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ನಿಮ್ಮ ತರಗತಿಯ 'ಹೃದಯ ಪರಿವರ್ತನೆ' ನಾಟಕ ಪ್ರದರ್ಶನವನ್ನೇರ್ಪಡಿಸುವುದಕ್ಕೆ ತೀರ್ಮಾನವಾಗಿದೆ. ಈ ವಿಷಯದ ಬಗ್ಗೆ ಪತ್ರಿಕಾ ವಾರ್ತೆಯನ್ನು ಬರೆಯಿರಿ.

### ಚಟುವಟಿಕೆ 4

ನಗರೀಕರಣದ ಹಾವಳಿಯಿಂದಾಗಿ ಪಕ್ಷಿ ಸಂತತಿ ಅಳಿಯುತ್ತಿದೆಯಲ್ಲವೇ? ಆದರೂ ನಿಮ್ಮ ಪರಿಸರದಲ್ಲಿ ಕೆಲವೊಂದು ಪಕ್ಷಿಗಳನ್ನು ನೀವು ಗಮನಿಸಬಹುದು. ಅವುಗಳಲ್ಲೊಂದರ ಬಗೆಗೆ ಲಘು ಟಿಪ್ಪಣಿಯನ್ನು ತಯಾರಿಸಿರಿ.

### ಚಟುವಟಿಕೆ 5

ಪದ್ಯದಲ್ಲಿ ಬಂದಿರುವ 'ತಾಯಿ' ಕವನಕ್ಕೆ ಸಮನಾದ ಇನ್ನೊಂದು ಕವನ ಭಾಗವನ್ನು ಇಲ್ಲಿ ನೀಡಲಾಗಿದೆ. ಅವೆರಡನ್ನೂ ಹೋಲಿಸಿ ಟಿಪ್ಪಣಿಯನ್ನು ಬರೆಯಿರಿ.

# ಪ್ರೇಮ ಜೀವಿ ಅಮ್ಮ

ಅಮ್ಮನಂಥ ಪ್ರೇಮ ಜೀವಿ
ಜಗದಿ ಬೇರಿಲ್ಲವೋ।
ಹಿರಿಯರದಕೆ ಅಮ್ಮನನ್ನು
ನಿಜದಿ ದೇವರೆಂದರೋ॥

ತನ್ನ ರಕ್ತ ಮಾಂಸವನ್ನೆ
ಮಗುವಿನಲ್ಲಿ ಹರಡಿಹ।
ಮಾಸ ಒಂಭತ್ತು ಅದನು
ಉದರದಲ್ಲಿ ಹೊತ್ತಿಹ॥

ಅಮ್ಮನಿಗೆ ಮಕ್ಕಳೆಂದೂ
ಕೇಡು ಬಗೆಯ ಬಾರದು।
ಜನ್ಮದಾತೆ, ಮೊದಲ ಗುರುವು
ಅವಳ ಮರೆಯ ಬಾರದು॥

ವಯಸ್ಸೆಷ್ಟಾದರೂ ಆದರೂ
ಅಮ್ಮ, ಅಮ್ಮ, ಅಮ್ಮ ನೇ।
ಬಯ್ಯಬೇಡಿ ಅಮ್ಮನನ್ನು
ಸುಮ್ಮ ಸುಮ್ಮ ಸುಮ್ಮನೆ॥

**– ಸಿ.ಯಚ್. ಗೋಪಾಲ ಭಟ್**

* * *